# ಗೋ ವಿಶ್ವ

Cow Universe | गौ विश्व

| ಸರ್ವಜಿತ್ ಸಂವತ್ಸರ | ಆಶ್ವಯುಜ | ನವಂಬರ್ ೨೦೦೭ | ಸಂಪುಟ–೧ | ಸಂಚಿಕೆ–೨ |
|---|---|---|---|---|

ಗುರುವಾಣಿ

## ಗೋ ಕೇಂದ್ರಿತ ಸಮಾಜ ಉದಿಸಲಿ



ಬಂಧುಗಳೇ,

ಕೋಟಿ ನೀರಾಜನದ ಅಭೂತಪೂರ್ವ ಯಶಸ್ಸಿನಿಂದ ನಮ್ಮ ಮನದುಂಬಿ ಬಂದಿದೆ. ಗೋ ಕೇಂದ್ರಿತ ಸಮಾಜ ವ್ಯವಸ್ಥೆಗೆ ಭಾಷ್ಯವೊಂದನ್ನು ಬರೆಯುವ ಪ್ರಯತ್ನ ರಾಜಧಾನಿಯಲ್ಲಿ ನಡೆಯಿತೆನ್ನುವುದು ಇದಕ್ಕೆ ಕಾರಣ.

ಭಾರತೀಯ ಸತ್ಪರಂಪರೆ ಲಾಗಾಯ್ತಿನಿಂದ ಪ್ರತಿಪಾದಿಸಿಕೊಂಡು ಬಂದ ಮೌಲ್ಯಕ್ಕೆ ಈ ಕಾರ್ಯಕ್ರಮದ ಮೂಲಕ ವಾಚ್ಯ ರೂಪ ಕೊಡಲು ಅಡಿಯಿಡಲಾಗಿದೆ. ಈ ದೃಷ್ಟಿಯಿಂದಲೇ ಕೋಟಿ ನೀರಾಜನಕ್ಕೆ ಪ್ರಾಮುಖ್ಯ ಬಂತೆನ್ನುವುದು ನಮ್ಮ ಪ್ರತಿಪಾದನೆ. ಇಡೀ ಕಾರ್ಯಕ್ರಮ ಹತ್ತು ಹಲವು ಹೊಳಹುಗಳನ್ನು ಪರಿಚಯಿಸಿತು.

ಇಂದಿನ ಆಧುನಿಕ ಸನ್ನಿವೇಶದಲ್ಲಿ ನಗರ ವ್ಯವಸ್ಥೆಯೇ ಅತ್ಯಂತ ಅವೈಜ್ಞಾನಿಕವೆಂಬುದನ್ನು ನಾವು ಪುನರುಚ್ಚರಿಸುತ್ತಲೇ ಬಂದಿದ್ದೇವೆ. ವಾಸಸ್ಥಾನವೆನ್ನುವುದು ಮನುಷ್ಯನಿಗೆ ಮಾತ್ರ ಸೀಮಿತವಲ್ಲ. ಅದು ಎಲ್ಲ ಜೀವಿಗಳ ಬದುಕಿಗೆ ಸಂಬಂಧಿಸಿದ್ದು; ಎನ್ನುವಾಗ ಗೋವೂ ಅದಕ್ಕೆ ಹೊರತಲ್ಲ. ಆದರೆ ಇಂದಿನ ನಗರಗಳು ತಮ್ಮ ಆಕ್ರಮಣಶೀಲ ಪ್ರವೃತ್ತಿಯಿಂದಾಗಿ ಉಳಿದೆಲ್ಲವನ್ನೂ ಹೊರದಬ್ಬುತ್ತಿವೆ. ಯಾಂತ್ರೀಕೃತ ಬದುಕಿನ ಶೈಲಿಯ ಇಂಥ ಅನಿವಾರ್ಯತೆ(?)ಯಲ್ಲಿ ಸಿಲುಕಿದ ಮನುಷ್ಯ ದೂರಾಗಾಮಿ ಅಪಾಯವನ್ನು ಗ್ರಹಿಸುವಲ್ಲಿ ವಿಫಲನಾಗುತ್ತಿದ್ದಾನೆ. ಇದರಲ್ಲಿ ಗೋವಿನ ಸಹವಾಸದಿಂದ ವಂಚಿತವಾಗುತ್ತಿರುವುದೂ ಒಂದು. ಅದೇನೇ ಇರಲಿ, ಕೊನೇ ಪಕ್ಷ ಗೋವಿಗೆ ನಿಮ್ಮ ಮನೆಯಲ್ಲಲ್ಲದಿದ್ದರೂ ಮನದೊಳಗೆ ತಾಣ ನೀಡುವ ಅಗತ್ಯ ಕೋಟಿ ನೀರಾಜನದಿಂದ ಮನವರಿಕೆಯಾಗಿದೆ.

ಇನ್ನು, ವೇದಿಕೆಯ ವೈಶಿಷ್ಟ್ಯದ ಬಗ್ಗೆ ಹೇಳಲೇಬೇಕು. ಪ್ರಾಯಶಃ ಸಾಂಸ್ಕೃತಿಕ ಇತಿಹಾಸದಲ್ಲೇ ಪ್ರಪ್ರಥಮವೆನ್ನಬಹುದಾದ ಪ್ರಯೋಗವೊಂದು ಕೋಟಿ ನೀರಾಜನದಲ್ಲಿ ಗಮನಸೆಳೆಯಿತು. ಗೋವಿನ ಬಗೆಗಿನ ಯಾವುದೇ ಕಾರ್ಯವಿರಲಿ, ಅಲ್ಲಿ ಗೋ ಮಾತೆಗೇ ಆದ್ಯತೆಯಿರಬೇಕು. ಅದನ್ನೇ ಕಟ್ಟಿಕೊಟ್ಟಿತ್ತು ಕೋಟಿನೀರಾಜನದ ಭವ್ಯ ಸಭಾಂಗಣ. ಗೋವನ್ನು ಮೆರೆಸಿ, ಉಳಿದೆಲ್ಲವನ್ನೂ ಮರೆಸುವ ದೃಷ್ಟಿಯಿಂದ ಪ್ರಧಾನ ವೇದಿಕೆಯಲ್ಲಿ ಆಕೆಗೆ ಮಾತ್ರ ಅಗ್ರಪೀಠವನ್ನು ಕಲ್ಪಿಸಲಾಗಿತ್ತು. ಅಷ್ಟೇ ಅಲ್ಲ, ಗೋ ಮಾತೆಗೆ ಸಮನಾಗಿ ಯಾರಿಗೂ ಕುಳಿತುಕೊಳ್ಳಲು ಆಸ್ಪದವಿರಲಿಲ್ಲ. ಅಲ್ಲಿ ಆಕೆ, ಬಿಟ್ಟರೆ ಆಕೆಯ ಪರಿವಾರ. ಮುಖ್ಯಮಂತ್ರಿ, ಸಂತರ ಆದಿಯಾಗಿ ಎಲ್ಲ ಗಣ್ಯರೂ ಆಕೆಯ ಪದತಲದಲ್ಲಿ, ಪ್ರಧಾನ ವೇದಿಕೆಗೆ ಅಭಿಮುಖವಾಗಿ ಕುಳಿತು ಇಡೀ ಕಲಾಪವನ್ನು ವೀಕ್ಷಿಸಿದ್ದು ವಿಶೇಷ. ಎಲ್ಲರೂ ತಂತಮ್ಮ ಸರದಿ ಬಂದಾಗ ಆಕೆಯ ಸನ್ನಿಧಿಗೆ ಹೋಗಿ ಸೇವಾ ಕೈಂಕರ್ಯ ಮುಗಿಸಿ ಪುನಃ ಕೆಳಗೆ ಆಸೀನರಾಗುತ್ತಿದ್ದರು.

### ಹೂರಣ

ಪ್ರಶ್ನೋತ್ತರ
ಗೋಮೂತ್ರ ಆರೋಗ್ಯವರ್ಧಕ ಹೇಗೆ?
ಮಾಸದ ಗೋವು –ಕೃಷ್ಣ
ಧರಣಿಮಂಡಲ ಮಧ್ಯದೊಳಗೊಂದು ಸಂಜೀವಿನಿ
ಗೋವಿನ ಸುತ್ತ... ಮುಗಿಯದ ವೃತ್ತ
ಕೋಟಿ ನೀರಾಜನ



ನಾವಿದನ್ನು ವಿಶೇಷವಾಗಿ ಪ್ರಸ್ತಾಪಿಸುತ್ತಿರುವುದಕ್ಕೂ ಕಾರಣಗಳಿವೆ. ಭಾರತೀಯ ಬದುಕಿನ ಗತ ವೈಭವವನ್ನೊಮ್ಮೆ ನೆನಪಿಸಿಕೊಳ್ಳಿ. ಇಲ್ಲಿ ದಿನಗಳು ಆರಂಭವಾಗುತ್ತಿದ್ದುದು ಗೋವಿನಿಂದ ಹಾಗೆಯೇ ದಿನ ಮುಗಿಯುವುದೂ ಆಕೆಯ ಸೇವೆಯೊಂದಿಗೇ. ಸೂರ್ಯೋದಯಕ್ಕೆ ಎದ್ದರೆ ಮೊದಲು ಹಸುವಿನ ಹೋಗುತ್ತಿದ್ದುದು ಕೊಟ್ಟಿಗೆಗೇ. ಅಲ್ಲಿರುವ ಹಸುಗಳ ಮೈದಡವಿ, ಹುಲ್ಲು-ನೀರು ಕೊಟ್ಟ ಬಳಿಕವೇ ಮುಂದಿನ ಕೆಲಸ. ರಾತ್ರಿ ಮಲಗುವ ಮುನ್ನ ಇದೇ ಪುನರಾವರ್ತನೆ. ಇದಷ್ಟೇ ಅಲ್ಲ. ಎಲ್ಲ ಶುಭಾಶುಭಗಳಿಗೂ ಗೋವಿನ ಸಾಕ್ಷಿ ಇದ್ದೇ ಇರುತ್ತಿತ್ತು. ಹೊಸ ಮನೆಗೆ ಹೋಗುವ ಮುನ್ನ ಮುಂದೆ ಗೋವಿರಲೇಬೇಕು.

ಒಟ್ಟಾರೆ ಗೋ ಕೇಂದ್ರಿತ ಜೀವನ ಕ್ರಮ ಅನುಸರಣೆಯಲ್ಲಿತ್ತು. ಬದುಕಿನ Centre Stage ನಲ್ಲಿ ಗೋವುಗಳಿದ್ದುವು. ಸುತ್ತು ಉಳಿದೆಲ್ಲವೂ ಅರಳುತ್ತಿತ್ತು. ಆದರೆ ವಸಾಹತೋತ್ತರ ಭಾರತ ಆರ್ಥಿಕತೆ, ಅಭಿವೃದ್ಧಿ, ವ್ಯಾಪಾರ, ಆಡಳಿತ ಇತ್ಯಾದಿಗಳ ಹೆಸರಿನಲ್ಲಿ ಮಗ್ಗುಲು ಬದಲಿಸಿತು. ದನ ಕೇಂದ್ರಿತ ಭಾರತ ಧನ ಕೇಂದ್ರಿತವಾಗಲು ಹೊರಟಿದ್ದೇ ನಮ್ಮೆಲ್ಲ ಇಂದಿನ ಸಮಸ್ಯೆಗಳಿಗೆ ಕಾರಣವೆನ್ನುವುದು ನಮ್ಮ ಸ್ಪಷ್ಟ ಅಭಿಮತ.

ಅನೇಕ ಶತಮಾನಗಳ ನಮ್ಮ ಸ್ವಾತಂತ್ರ್ಯ ಸಂಘರ್ಷ ಇಂದು ಯಶಸ್ಸಿನ ಘಟ್ಟ ಮುಟ್ಟುತ್ತಲಿದೆ. ಈ ರಾಷ್ಟ್ರದ ಸಾರ್ವಭೌಮ ಜೀವನವನ್ನು ಕಟ್ಟುವ ಸುವರ್ಣ ಸಂಧಿ ನಮಗಿಂದು ಒದಗಿಬಂದಿದೆ. ಹಾಗೆಯೇ ಇದೊಂದು ಗಂಭೀರ ಸವಾಲೂ ಆಗಿದೆ. ನಮ್ಮ ರಾಷ್ಟ್ರ ಜೀವನವನ್ನು ಯಾವ ಆದರ್ಶದ ಬೆಳಕಿನಲ್ಲಿ, ಯಾವ ಸಿದ್ಧಾಂತದ ಅಡಿಗಲ್ಲ ಮೇಲೆ ಕಟ್ಟಬೇಕು ಎಂಬ ಸವಾಲಿಗೆ ಉತ್ತರ ಕೊಡಬೇಕಿದೆ. ರಾಷ್ಟ್ರೀಯ ಪ್ರತಿಭೆ, ಪರಂಪರೆ, ತತ್ತ್ವಜ್ಞಾನ, ಜೀವನಾದರ್ಶ ಇವೆಲ್ಲದರ ಮೇಲೂ ಬೆಳಕು ಬೀರಬೇಕಿದೆ. ಅಂಥದೊಂದು ಕೆಲಸ ಕೋಟಿ ನೀರಾಜನದಿಂದಾಗಿದೆ. ಕೋಟಿ ಬೆಳಕಿನಡಿ ಲಕ್ಷಾಂತರ ಮಂದಿಯ ಹೃದಯಕ್ಕೆ ಅಮೃತ ಸಿಂಚನ ನೀಡಲಾಗಿದೆ. ಜನ ಸಾಮಾನ್ಯರ ಅಂತಃಕರಣ ತಟ್ಟಿ ಎಬ್ಬಿಸುವ ಮೂಲಕ ರಾಷ್ಟ್ರೋತ್ಥಾನಕ್ಕಾಗಿ ಸ್ವಯಂಪ್ರೇರಣೆ, ಕಾರ್ಯೋತ್ಸಾಹ, ತ್ಯಾಗಗಳನ್ನು ಬೆಳಗಲಾಗಿದೆ. ಈ ವೈಭವಶಾಲಿ ಬೆಳಕು ಜಾಜ್ವಲ್ಯಮಾನವಾಗಲಿ. ಅದರಡಿ ಗೋಮಾತೆಯ ಗುಣ, ಸೌಂದರ್ಯ ಪ್ರತಿಫಲನಗೊಳ್ಳುತ್ತಿರಲೆಂದು ಆಶಿಸುತ್ತೇವೆ.

ವಂದೇ ಗೋ ಮಾತರಮ್.

**- ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**
**ಶ್ರೀ ರಾಮಚಂದ್ರಾಪುರ ಮಠ**

## ಪ್ರಶ್ನೋತ್ತರ

ಪ್ರ: ಸೀಮೆ ಹಸುಗಳು ೨೦-೩೦ ಲೀಟರ್ ಹಾಲು ಕೊಡುತ್ತವೆ. ಆದರೆ ನಮ್ಮ ನಾಟಿ ಹಸುಗಳು ३-४ ಲೀಟರ್ ಮಾತ್ರ ಕೊಡುತ್ತವೆ. ಆದ್ದರಿಂದ ನಾಟಿ ಹಸುಗಳನ್ನು ಏಕೆ ಸಾಕಬೇಕು ?

ಉ: ಹಾಲು ಕೊಡುವ ಒಂದೇ ಅಂಶದ ಮೇಲೆ ಭಾರತೀಯ ಗೋತಳಿಗಳ ಮೌಲ್ಯ ಮಾಪನ ಮಾಡುವುದು ಖಂಡಿತಾ ಸರಿಯಲ್ಲ. ವಿದೇಶಿ ತಳಿಗಳನ್ನು ಆ ದೇಶದಲ್ಲಿ ಅಭಿವೃದ್ಧಿಪಡಿಸಿದ್ದು ಎರಡೇ ಉದ್ದೇಶಗಳಿಂದ- ೧)ಹಾಲು ೨)ಮಾಂಸ. ಆದರೆ ಭಾರತದ ಕೃಷಿ ಪ್ರಧಾನ ವ್ಯವಸ್ಥೆಯಲ್ಲಿ ಗೋವುಗಳಿಗೆ ಅನೇಕ ಪಾತ್ರಗಳಿವೆ. ಅವುಗಳ ಸಗಣಿ ಮತ್ತು ಗಂಜಲ ಭೂಮಿಗೆ ಅಮೂಲ್ಯವಾದ ಸಾವಯವ ಗೊಬ್ಬರ ಒದಗಿಸುತ್ತವೆ. ಹೆಣ್ಣು ಕರುಗಳು ವಂಶಾಭಿವೃದ್ಧಿ ಮಾಡುತ್ತವೆ ಹಾಗೂ ಅಮೃತ ಸಮಾನ ಹಾಲು ನೀಡುತ್ತವೆ. ಒಟ್ಟಾರೆಯಾಗಿ ನೋಡಿದಾಗ ಭಾರತೀಯ ಗೋ ತಳಿಗಳನ್ನು ವಿದೇಶಿ ತಳಿಗಳೊಂದಿಗೆ ಹೋಲಿಕೆ ಮಾಡುವುದು ಸರಿಯಲ್ಲ.

ಪ್ರ: ಟ್ರ್ಯಾಕ್ಟರ್ ಟಿಲ್ಲರುಗಳ ಈ ದಿನಗಳಲ್ಲಿ ಎತ್ತುಗಳಿಗೆ ಏನು ಕೆಲಸ ಸ್ವಾಮಿ ?

ಉ: ಭಾರತದಲ್ಲಿ ೭೦% ರಷ್ಟು ರೈತರ ಹಿಡುವಳಿ ಗಾತ್ರ ೫ ಎಕರೆಗಿಂತಲೂ ಕಡಿಮೆ. ಅಂದರೆ ಬಹುಪಾಲು ರೈತರು ಸಣ್ಣ ಹಾಗೂ ಅತಿ ಸಣ್ಣ ರೈತರು. ಇಷ್ಟು ಸಣ್ಣ ಹಿಡುವಳಿಗಳಲ್ಲಿ ಟ್ರ್ಯಾಕ್ಟರ್ ಕೃಷಿ ಮಾಡುವುದು (ದುಬಾರಿ ಡೀಸಿಲ್ ಬೆಲೆಯಲ್ಲಿ) ಲಾಭದಾಯಕವಲ್ಲ. ಹಾಗಾಗಿ ಇಂದಿಗೂ ಕೋಟ್ಯಾನುಕೋಟಿ ರೈತರು ಕೃಷಿಗೆ ಎತ್ತುಗಳನ್ನೇ ಬಳಸುತ್ತಾರೆ. ಈ ದೇಶದಲ್ಲಿ ನಾವೇನಾದರೂ ಎರಡು ಹೊತ್ತು ಅನ್ನ ಕಾಣುತ್ತಿದ್ದರೆ ಅದಕ್ಕೆ ಮೂಕ ಬಸವಣ್ಣಗಳೇ ಕಾರಣ ಹೊರತು ಟ್ರ್ಯಾಕ್ಟರ್, ಟಿಲ್ಲರುಗಳಲ್ಲ ಇದು ಸತ್ಯ. ಇಡೀ ದೇಶದಲ್ಲಿ ಟ್ರ್ಯಾಕ್ಟರ್ ಟಿಲ್ಲರು ಬಳಸುವ ರೈತರ ಪ್ರಮಾಣ ಕೇವಲ ೨%. ಹೀಗಿರುವಾಗಲೂ ಟ್ರ್ಯಾಕ್ಟರ್ ಕೊಳ್ಳಲು ಬ್ಯಾಂಕ್-ಸಾಲ, ಸಬ್ಸಿಡಿ ಎಲ್ಲ ದೊರೆಯುತ್ತದೆ. ಎತ್ತು ಕೊಳ್ಳುವ ರೈತನಿಗೆ?

ಪ್ರ: ಗೋ ಮಾಂಸ ಸಹಜ ಆಹಾರ ಯಾಕೆ ಅಲ್ಲ?

ಉ: ಯಾವುದೇ ಮಾಂಸ ಮಾನವನಿಗೆ ಸಹಜ ಆಹಾರ ಅಲ್ಲ.

# ಗೋಮೂತ್ರ – ಆರೋಗ್ಯವರ್ಧಕ ಹೇಗೆ?

ಗೋಮೂತ್ರವು ಪುರಾತನಕಾಲದಿಂದ ಔಷಧಿಯಾಗಿ ಬಳಕೆಯಾಗುತ್ತಿದ್ದ ಗೋಜನ್ಯ ಪದಾರ್ಥವಾಗಿದೆ. ಆಯುರ್ವೇದ ಶಾಸ್ತ್ರಗಳಲ್ಲಿ ವಿಸ್ತೃತವಾಗಿ ಈ ಬಗ್ಗೆ ವಿವರಣೆಗಳಿವೆ. ಆಧುನಿಕ ವಿಜ್ಞಾನ ಇತ್ತೀಚೆಗಷ್ಟೆ ಈ ನಿಟ್ಟಿನಲ್ಲಿ ಕಾರ್ಯವೆಸಗುತ್ತಿದೆ. ವಿಶೇಷವೆಂದರೆ ನಡೆದ ಕೆಲವೇ ಸಂಶೋಧನೆಗಳು ಗೋವಿನ ಮಹಾತ್ಮೆಯನ್ನು ಸಾರುವಂಥದ್ದಾಗಿದೆ. ಇವರಲ್ಲಿ ಪ್ರಮುಖವಾದದ್ದು ಗೋಮೂತ್ರ ಸೇವನೆಯಿಂದ ದೇಹದ ರೋಗನಿರೋಧಕ ಶಕ್ತಿ ಅಧಿಕವಾಗುವಂತಹದ್ದು.

ರಕ್ತದಲ್ಲಿ ದೇಹದ ರೋಗನಿರೋಧಕ ಶಕ್ತಿಯನ್ನು ಹೊಂದಿರುವಂಥಹ ಜೀವಕೋಶಗಳು ಮ್ಯಾಕ್ರೋಫೇಸಸ್ ಆಗಿವೆ. ಈ ಜೀವಕೋಶಗಳು ದೇಹದಲ್ಲಿ ಸೈನಿಕರಿದ್ದಂತೆ. ದೇಹದೊಳಗೆ ಯಾವುದೇ ಕೀಟಾಣು ಪ್ರವೇಶಿಸಿದಾಗ ತಕ್ಷಣ ಎಚ್ಚೆತ್ತುಕೊಳ್ಳುವ ಮ್ಯಾಕ್ರೋಫೇಸಸ್‌ಗಳು ಆ ಕೀಟಾಣುಗಳ ಮೇಲೆ ಯುದ್ಧಸಾರಿ ಅವುಗಳನ್ನು ಕೊಲ್ಲುತ್ತವೆ ಅಥವಾ ಸ್ವಾಹಾ ಮಾಡುತ್ತವೆ. ಈ ಕ್ರಿಯೆಯಿಂದಾಗಿ ದೇಹಕ್ಕೆ ಜ್ವರ ಬರುತ್ತದೆ. ಮ್ಯಾಕ್ರೋಫೇಸಸ್‌ಗಳ ಈ ಯುದ್ಧದಲ್ಲಿ ಕೀಟಾಣುಗಳ ಸಂಖ್ಯೆ ಅಧಿಕವಾಗಿದ್ದರೆ ಕೀಟಾಣುಗಳು ಗೆಲ್ಲುತ್ತವೆ ಅಂದರೆ ದೇಹ ಸೋಲುತ್ತದೆ. ರಕ್ತವು ಹೆಚ್ಚು ಹೆಚ್ಚು ಮ್ಯಾಕ್ರೋಫೇಸಸ್‌ಗಳನ್ನು ಉತ್ಪಾದಿಸುತ್ತದೆ. ಅದೂ ಸಾಲದಾದಾಗ ರೋಗ ವಿಜೃಂಭಿಸುತ್ತದೆ.

ಗೋಮೂತ್ರ ಸೇವನೆಯ ಚಮತ್ಕಾರ ಇಲ್ಲಿ ನೋಡಿ. ಮ್ಯಾಕ್ರೋಫೇಸಸ್‌ನ ಸಂಖ್ಯೆ ೧೦೪ ಶೇಕಡಾ ಅಧಿಕವಾಗುವುದು, ಸಂಶೋಧನೆಯಿಂದ ದೃಢಪಟ್ಟಿದೆ. ಈ ಸಂಶೋಧನಾ ಸರಣಿಯ ಮುಂದುವರಿದ ಭಾಗ ಇನ್ನಷ್ಟು ವಿಶೇಷ. ಎಲ್ಲಾ ಮೂತ್ರವೂ ಇದೇ ಗುಣವನ್ನು ತೋರಿಸುತ್ತಿದೆಯೋ ಎಂದು ಇತರ ಪ್ರಾಣಿಗಳ ಮೂತ್ರವನ್ನೂ ಪರೀಕ್ಷೆಗೆ ಒಳಪಡಿಸಿದರು.

ವಿದೇಶೀ ಸಂಕರ ಗೋವಿನ ಮೂತ್ರವು ೧೨ ಶೇಕಡಾ ಮ್ಯಾಕ್ರೋಫೇಸಸ್‌ಗಳ ಸಂಖ್ಯೆಯನ್ನು ಅಧಿಕ ಮಾಡಿತ್ತು. ಎಮ್ಮೆಯ ಮೂತ್ರ ೧೮ ಶೇಕಡಾ ಅಧಿಕ ಮಾಡಿದರೆ ಆಡಿನ ಮೂತ್ರ ೪೦ ಶೇಕಡಾಕ್ಕಿಂತ ಅಧಿಕ ಸಂಖ್ಯೆ ವೃದ್ಧಿಮಾಡಿತ್ತು. ಅಂದರೆ ದೇಶೀ ಗೋವಿನ ಅರ್ಧದಷ್ಟು ಗುಣ ಆಡಿಗೆ, ಅದರರ್ಧ ಎಮ್ಮೆಗೆ, ಕನಿಷ್ಠ ವಿದೇಶೀ ಗೋವಿಗೆ ಎಂದಾಯಿತಲ್ಲವೇ? ಗೋಮೂತ್ರ ಸೇವನೆ ಪ್ರತಿದಿನ ಮಾಡಿದರೆ ದೇಹದ ರೋಗ ನಿರೋಧಕ ಅಧಿಕವಾಗಿ ಎಂತಹ ರೋಗವನ್ನೂ ವಿರೋಧಿಸುವ ಶಕ್ತಿ ಬರುತ್ತದೆ. ಗೋಮೂತ್ರವನ್ನು ಸಂಗ್ರಹಿಸಿ ಸೋಸಿ ನಂತರ ೧–೨ ಚಮಚ ಹಾಗೆಯೇ ಸೇವಿಸಬಹುದು. ಗೋಮೂತ್ರವನ್ನೂ ಭಟ್ಟಿ ಇಳಿಸಿ, ಅರ್ಕ ಮಾಡಿಯೂ ಬಳಸಬಹುದು. ಗೋಮೂತ್ರದ ತಾಜಾರೂಪದ ಸೇವನೆಯೂ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ.

– **ಡಾ. ವೈ. ವಿ. ಕೃಷ್ಣಮೂರ್ತಿ**

*ಗೋವೇ ನಮ್ಮ ದೇಶದ ಸಂಪನ್ಮೂಲ, ಆಸ್ತಿ*
*ನಾವೇಕೆ ತೋರಬೇಕು ನಿರಾಸಕ್ತಿ?!*




ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ **ಗೋ ವಿಶ್ವ** ಇ–ಪತ್ರಿಕೆಯ ಲೋಕಾರ್ಪಣೆ

## ಮಾಸದ ಗೋವು

# "ಕೃಷ್ಣಾ"ಕ್ಕೆ ಬೇಕಾಗಿದೆ ತುರ್ತಾಗಿ ರಕ್ಷಣೆ

ಮೊನ್ನೆ ಶ್ರೀಮಠದ ಸದಾಶಿವ ಮೊಂತಿಮಾರ್ ಅವರನ್ನು ಮಾಸದ ಗೋವು ಅಂಕಣದ ವಿಚಾರವಾಗಿ ಸಂಪರ್ಕಿಸಿದಾಗ ಆಘಾತಕಾರಿ ವಿಚಾರ ಒಂದನ್ನು ಹೇಳಿದರು. ಅದು ಭಾರತೀಯ ಗೋತಳಿ ಕೃಷ್ಣಾ ಅಥವಾ ಕೃಷ್ಣಾತೀರಿ ವಿನಾಶದ ತುತ್ತತುದಿಯಲ್ಲಿರುವ ಬಗ್ಗೆ. ಒಂದು ಕಾಲದಲ್ಲಿ ಕೃಷ್ಣಾತೀರಪ್ರದೇಶದ ಕಲ್ಲು ಮಿಶ್ರಿತ ಕಪ್ಪು ಮಣ್ಣಿನಲ್ಲಿ ಬೇಸಾಯ ಮಾಡುವುದೇ ಒಂದು ಸವಾಲು ಎಂದೆನಿಸಿದ್ದಾಗ ರೈತರ ಜೀವನನಿರ್ವಹಣೆಯ ನೊಗಕ್ಕೆ ತಾವೂ ಹೆಗಲು ಕೊಟ್ಟು, ಅಲ್ಲಿನ ಕೃಷಿಪದ್ಧತಿಯ ಜೀವನಾಡಿ ಎನಿಸಿ, ರೈತರ ಮೊಗದಲ್ಲಿ ನಗುವರಳಿಸಿದ್ದ ಕೃಷ್ಣಾ ತಳಿ ವಿನಾಶದ ಅಂಚಿಗೆ ಸರಿದು ಈಗ, ಕಷ್ಟಪಟ್ಟು ಹುಡುಕಿದರೆ ೩೦-೩೫ ಹಸುಗಳು, ೫-೬ ಹೋರಿಗಳಷ್ಟೆ ಇವೆ ಎಂಬ ಹಂತ ತಲುಪಿದೆ ಎಂದು ತಿಳಿಸುವಾಗ ಆ ಗೋಪ್ರೇಮಿಯ ಧ್ವನಿಯಲ್ಲಿ ಕಳವಳದ ನಡುಕ....

ಕೃಷ್ಣಾ ನದಿಯ ದಂಡೆಗುಂಟ ಇರುವ ವಿಶಿಷ್ಟ ಕಪ್ಪು ಕಲ್ಲು ಮಣ್ಣಿಗೆ, ಘೋರ ಬಿಸಿಲಿಗೆ ಹೂಟೆ ಮಾಡುವುದೇ ಒಂದು ಸಮಸ್ಯೆ ಅಂತಾಗಿ ಕಷ್ಟಸಹಿಷ್ಣುತಳಿಯೊಂದರ ಅನ್ವೇಷಣೆಯಲ್ಲಿ ದೊರಕಿದ್ದು ಕೃಷ್ಣಾ ಅಥವಾ ಕೃಷ್ಣಾತೀರಿ . ಹತ್ತೊಂಬತ್ತನೆ ಶತಮಾನದ ಆದಿಯಿಂದಲೂ ಮಲಪ್ರಭಾ, ಘಟಪ್ರಭಾ ಹಾಗೂ ಕೃಷ್ಣಾ ನದಿತೀರಪ್ರದೇಶ ಅಂದರೆ ಮಹಾರಾಷ್ಟ್ರದ ಮೀರಜ್, ಸಾಂಗ್ಲಿ, ಕೊಲ್ಲಾಪುರ ಕರ್ನಾಟಕದ ಜಮಖಂಡಿ, ಬೆಳಗಾವಿ, ರಾಯಚೂರು ಪ್ರದೇಶದ ಜೀವನಾಡಿಯಾಗಿದ್ದವು ಕೃಷ್ಣಾ ತಳಿಯ ಗೋವುಗಳು. ಮಹಾರಾಷ್ಟ್ರದ ಸಾಂಗ್ಲಿ ಮಹರಾಜ ಇದರ ಮುಖ್ಯ ಪೋಷಕ.




ಅತಿ ಉಷ್ಣ ಹವಮಾನದಲ್ಲೂ ವಿರಾಮವಿಲ್ಲದೆ ೩೫-೪೦ ಕಿ.ಮಿ. ನಡೆಯಬಲ್ಲ ಇವುಗಳ ಕಷ್ಟಸಹಿಷ್ಣುತೆ, ೨ ಟನ್ನಿನವರೆಗೂ ಭಾರ ಎಳೆಯಬಲ್ಲ ಸಾಮರ್ಥ್ಯ, ಅತಿ ಕಡಿಮೆ ಆಹಾರ ಸೇವಿಸಿ ದಿನಕ್ಕೆ ೮-೧೦ ತಾಸು ದುಡಿಯಬಲ್ಲ ಗುಣಗಳಿಂದ ಕೃಷ್ಣಾ, ಇಂದಿಗೂ ಸಣ್ಣ ಮತ್ತು ಮಧ್ಯಮ ರೈತರಿಗೆ ವರದಾನ. ಬೆವರಿನ ಗ್ರಂಥಿಗಳ ಸಾಂದ್ರತೆ, ಶರೀರ ರಚನೆ ಮುಖ್ಯವಾಗಿ ಗೊರಸಿನ ರಚನೆ ಈ ಭಾಗದ ನೆಲಕ್ಕೆ, ಹವಾಗುಣಕ್ಕೆ ಅತ್ಯಂತ ಸೂಕ್ತ. ಸಂತಾನದ ಅವಧಿ ಕೂಡ ದೊಡ್ಡದೇ, ವರ್ಷಕ್ಕೊಂದರಂತೆ ೯-೧೨ ಕರು ಈಯಬಲ್ಲವು. ಹಾಲು ದಿನಕ್ಕೆ ನಾಲ್ಕರಿಂದ ಐದು ಲೀಟರ್. ನೆಲ ಮುಟ್ಟುವಂತಿರುವ ಬಾಲ, ಸಣ್ಣ ಕಿವಿ, ಅಗಲ ಹಣೆ, ಒಳಚಾಚಿಕೊಂಡಂತಿರುವ ಕೊಂಬು ಹೊಂದಿದೆ ಕೃಷ್ಣಾ. ತಮ್ಮ ವೈಶಿಷ್ಟ್ಯತೆಗಳಿಂದ ವಿದೇಶಿಯರನ್ನೂ ಸೆಳೆದ ಇವು ಬ್ರೆಜಿಲ್, ದಕ್ಷಿಣ ಅಮೆರಿಕದ ದೇಶಗಳಿಗೆ ದೊಡ್ಡ ಸಂಖ್ಯೆಯಲ್ಲಿ ರಫ್ತಾಗಿವೆ.



ಕೃಷ್ಣ. ಕರ್ನಾಟಕ

ಇಷ್ಟೆಲ್ಲ ಗುಣವಿಶೇಷಗಳನ್ನು ಹೊಂದಿದ್ದರೂ ಹಿತ್ತಲ ಗಿಡ ಮದ್ದಲ್ಲ ಎನ್ನುವ ಮನೋಭಾವಕ್ಕೆ ತುತ್ತಾಗಿ ಅವನತಿಯ ಅಂಚಿಗೆ ಕೃಷ್ಣಾ ಸರಿದಿರುವುದು ಖೇದಕರ. National Dairy research institute(NDRI), Indian Council oF Agricultural Research(ICAR), ಜೊತೆಗೆ ಶ್ರೀರಾಮಚಂದ್ರಾಪುರ ಮಠ ಈ ತಳಿಯ ರಕ್ಷಣೆಗೆ ಸಮರೊಪಾದಿಯಲ್ಲಿ ಸಜ್ಜಾಗಿವೆ. ಕೃಷ್ಣಾತೀರಿಯ ಕರೆಗೆ ನಾವೂ ಓಗೊಡೋಣ ಅಲ್ಲವೆ?

– ಮಧುಕೇಶ ದೊಡ್ಡೇರಿ



**ಲಹರಿ**

# ಧರಣಿ ಮಂಡಲ ಮಂಡಲದೊಳಗೊಂದು ಸಂಜೀವಿನಿ

ಇಟ್ಟರೆ ಸಗಣಿಯಾದೆ, ತಟ್ಟಿದರೆ ಕುರುಳಾದೆ,
ಆಯವರಿತು ಹೊಡೆಯೆ ಮಧುರಗಾನಕ್ಕಾದೆ.

ಹಾದಿಬೀದಿಯಲಿರುವ ಕಸದ ಹುಲ್ಲನು ಹುಡುಕಿ ಮೇದು, ಮನೆಗೈದಿನಾನಮೃತವೀವೆ; ಅದನುಂಡು ಎನಗೆರಡು ಬಗೆವ ನೀನಾರಿಗಾದೆಯೋ ಎಲೆ ಮಾನವ? ಎಂಬ ಗೋಮಾತೆಯ ನುಡಿಯಲ್ಲಿ ಗೋವಿನ ತ್ಯಾಗವನ್ನೂ, ಮಾನವನ ಕ್ರೌರ್ಯವನ್ನೂ ಕವಿ ಎಷ್ಟು ಅರ್ಥಪೂರ್ಣವಾಗಿ ಬಿಂಬಿಸಿದ್ದಾರಲ್ಲವೇ? ಆ ಮಹಾನ್ ಕವಿ ಎಸ್. ಜಿ. ನರಸಿಂಹಾಚಾರ್ಯರಿಗೆ ವಂದನೆಯನ್ನು ಸಲ್ಲಿಸಲೇಬೇಕು.

ಗೋಮಾತೆ ನಮಗೆ ಏನು ನೀಡಿದ್ದಾಳೆ ಎಂಬ ಪ್ರಶ್ನೆಯನ್ನು ನಮಗೆ ನಾವು ಹಾಕಿಕೊಂಡರೆ, ಉತ್ತರ ನೀಡುವುದು ಕಷ್ಟಸಾಧ್ಯವಾಗುತ್ತದೆ. ಏಕೆಂದರೆ ಆಕೆ ಮನುಕುಲಕ್ಕೆ ಸಕಲವನ್ನೂ ನೀಡಿದ್ದಾಳೆ.

ಬೆಳಗಿನಜಾವ ಚುಮುಚುಮು ಚಳಿಯಲ್ಲಿ, ದಿನಪತ್ರಿಕೆಯನ್ನು ಓದುವಾಗ, ಆಸುಂದರ ಮುಂಜಾನೆಗೆ ಜೊತೆಯಾಗುವುದು ಬಿಸಿಬಿಸಿಯಾದ ದಪ್ಪಹಾಲಿನಿಂದ ಮಾಡಿದ ಕಾಫಿ ಅಥವಾಚಹಾ. ಆ ಪಾನೀಯದ ರುಚಿಯನ್ನು ಸವಿಯುವಾಗ ಹಾಲನ್ನು ನಮಗಿತ್ತ ಗೋಮಾತೆಯ ಬಗ್ಗೆ ಒಂದು ಕ್ಷಣವಾದರೂ ಆಲೋಚಿಸುತ್ತೇವೆಯೇ? ಹಾಲಿನ ಉತ್ಪನ್ನಗಳಿಂದ ತಯಾರಿಸಿದ ಸಿಹಿತಿಂಡಿಗಳನ್ನು ಬಾಯಿ ಚಪ್ಪರಿಸಿ ತಿನ್ನುವಾಗ ಗೋಮಾತೆಯನ್ನು ಸ್ಮರಿಸುತ್ತೇವೆಯೇ? ಹೋಗಲಿ, ಉದ್ಯಾನದಲ್ಲಿ ಕುಳಿತಾಗ ಕಣ್ತುಂಬುವ ಪುಷ್ಪಗಳ ಬೆಳವಣಿಗೆಗೆ ಗೊಬ್ಬರದ ಕಾಣಿಕೆಯಿತ್ತ ಆ ಗೋಮಾತೆಯ ಬಗ್ಗೆ ನಾವು ಆಲೋಚಿಸಿದ್ದೇವೆಯೇ? ಪ್ರಾಮಾಣಿಕವಾಗಿ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಿದರೆ, 'ಇಲ್ಲ' ಎಂಬ ಉತ್ತರವೇ ದೊರೆಯುತ್ತದೆ. ಹಾಗದರೆ ನಾವೆಷ್ಟು ಕೃತಘ್ನರಲ್ಲವೇ?

ಮಾನವ ತಾಯಿಯ ಹಾಲಿನ ನಂತರ ಕುಡಿಯುವುದೇ ಹಸುವಿನ ಹಾಲು. ವೈಜ್ಞಾನಿಕವಾಗಿ ಹಸುವಿನ ಹಾಲು ಎಲ್ಲಾರೀತಿಯ ಪೋಷಕಾಂಶಗಳಿರುವ ಪರಿಪೂರ್ಣ ಆಹಾರ.

ಭಾರತೀಯ ಸಂಸ್ಕೃತಿಯಲ್ಲಿ ಗೋವಿಗೆ ಪೂಜ್ಯಸ್ಥಾನವಿದೆ. ಆಕೆಯಲ್ಲಿ ಕೋಟಿ ದೇವತೆಗಳು ವಾಸಿಸುತ್ತಾರೆ ಎಂಬ ನಂಬಿಕೆಯಿದೆ. ಒಂದು ರೀತಿಯಲ್ಲಿ ಹೇಳುವುದಾದರೆ ಗೋಮಾತೆ 'ನಡೆದಾಡುವ ದೇಗುಲ . ಅಂತಹ ಗೋಮಾತೆಯನ್ನು ಪೂಜಿಸುವುದಿರಲಿ,ನೆನೆಸಿಕೊಳ್ಳಲಾದರೂ ಮಾನವನಿಗೆ ಸಮಯವಿದೆಯೇ ? ಅವಳನ್ನು ನೆಮ್ಮದಿಯಿಂದ ಬದುಕಲು ಬಿಡುವ ಮನಸ್ಥಿತಿಯೂ ಮಾನವನಿಗಿಲ್ಲ. ತನ್ನ ರಕ್ತದ ಹನಿಹನಿಯನ್ನು ಮಾನವನ ಉಪಯೋಗಕ್ಕಾಗಿ ಮೀಸಲಿಟ್ಟ ಆಕೆಯನ್ನು ಹೊಡೆದು, ಕಡಿದು ತಿನ್ನುವತ್ತ ಮನವನು ಉತ್ಸುಕನಾಗಿದ್ದಾನೆ ಎಂದರೆ ಅದು ವಿಪರ್ಯಾಸವಲ್ಲದೆ ಇನೇನು? ಇದು ಆತನ ಬುದಿ ವಂತಿಕೆಯ ಲಕ ಣವೋ ಅಥವಾ ಮೂರ್ಖತನದ ಪರಮಾವಧಿಯೋ?

ಪುರಾಣಗಳಲ್ಲಿ ಹೇಳಿದುದು ಮಾತ್ರವಲ್ಲ, ವೈಜ್ಞಾನಿಕವಾಗಿಯೂ ಗೋವಿನಿಂದ ಉತ್ಪತ್ತಿಯಾಗುವ ಪ್ರತಿಯೊಂದು ವಸ್ತುವೂ ಉಪಯುಕ್ತ ಹಾಗೂ ಅನೇಕ ಮಾರಕ ರೋಗಗಳಿಗೆ ರಾಮಬಾಣ.

ತೋಟಗಾರಿಕೆ ನನ್ನ ತಾಯಿಯ ಪ್ರಿಯವಾದ ಹವ್ಯಾಸ. ಮನೆಯ ಕೈದೋಟದಲ್ಲಿ ವಿವಿಧ ಬಗೆಯ ಹೂಗಳನ್ನೂ,ತರಕಾರಿಗಳನ್ನೂ ಬೆಳೆಸಿದ್ದರು. ಆದರೆ ಹೂವಿನ ಮೊಗ್ಗು ಅರಳುವ ಮೊದಲೇ ಯಾವುದೋ ಕೀಟಕ್ಕೆ ಆಹಾರವಾಗುತ್ತಿತ್ತು. ಕೀಟ ಎಲೆಗಳನ್ನೂ ಬಿಡದೆ ಭಕ್ಷಿಸಿದುದರಿಂದ ಹೂವಿನ ಗಿಡಗಳು ಸಾವಿಗೀಡಾಗುತ್ತಿದ್ದವು. ಬೆಳೆಸಿದ ಅಲಸಂದೆ ಕಾಯಿಗಳ ಮೇಲೆ 'ಬಂಬುಚ್ಚಿ' ಎಂಬ ಕೀಟ ಕುಳಿತು ಅದರ ಸಾರವನ್ನೆಲ್ಲಾ ಹೀರಿಬಿಡುತ್ತಿತ್ತು. ಹರಿವೆ ಗಿಡಗಳು (ದಂಟಿನಸೊಪ್ಪು) ಕಂಬಳಿ ಹುಳಗಳಿಗೆ ಆಹಾರವಾಗುತ್ತಿದ್ದವು. ಕೊನೆಗೆ ಯಾರದೋ ಸಲಹೆ ಮೇರೆಗೆ ಗೋಮೂತ್ರವನ್ನು ಸಿಂಪಡಿಸಿದಾಗ ದೊರೆತ ಫಲಿತಾಂಶ ಮಾತ್ರ ಅದ್ಭುತವಾಗಿತ್ತು. ತರಕಾರಿ, ಹೂವಿನ ಗಿಡಗಳನ್ನು ಹಾಳುಗೆಡಹುತ್ತಿದ್ದ ಕೀಟಗಳೆಲ್ಲಾ ಮಾಯ! ಇಂದು ನಮ್ಮಲ್ಲಿ ಗಿಡಗಳು ಹುಲುಸಾಗಿ, ಆರೋಗ್ಯವಾಗಿ ಬೆಳೆಯುತ್ತಿವೆ. ಇದರಿಂದ ಗೋಮೂತ್ರ ಅತ್ಯಂತ ಉಪಯುಕ್ತ ಕೀಟನಾಶಕ ಎಂಬುದು ಸ್ಪಷ್ಟವಾಗುತ್ತದೆ. ಇದರಿಂದ ಯಾವುದೇ ರೀತಿಯ ದುಷ್ಪರಿಣಾಮಗಳಿಲ್ಲ. ಕೆಲವರು ಅದೆಷ್ಟೋ ಪ್ರಮಾಣದಲ್ಲಿ ಕಾಸರಕನ ಎಲೆಗಳನ್ನು ಗೋಮೂತ್ರದಲ್ಲಿ ಕೊಳೆಯಿಸಿ, ಕೀಟನಾಶಕವಾಗಿ ಉಪಯೋಗಿಸಿ, ಯಶಸ್ವಿಯಾಗಿದ್ದಾರೆ.

ಗೋಮೂತ್ರ ಹಾಗೂ ಗೋಮಯ ಬೆರೆತ, ಹಟ್ಟಿತೊಳೆದ ನೀರನ್ನುಗಿಡಗಳಿಗೆ ಉಣಿಸುವುದರಿಂದ ಗಿಡಗಳು ಹುಲುಸಾಗಿ ಬೆಳೆಯುತ್ತವೆ ಹಾಗೂ ಒಳ್ಳೆಯ ಫಸಲನ್ನೂ ನೀಡುತ್ತವೆ. ಇದನ್ನು ಉಪಯೋಗಿಸುವಾಗ ಬೇರೆ ಗೊಬ್ಬರಗಳ ಅವಶ್ಯಕತೆಯಿಲ್ಲ. ಇದರಿಂದ ಗೋಮೂತ್ರ ಹಾಗೂ ಗೋಮಯ ಗಿಡಗಳಿಗೆ ಉತ್ತಮ ಗೊಬ್ಬರ ಎಂಬುದು ಸ್ಪಷ್ಟವಾಗುತ್ತದೆ.

ಮಂಗಳೂರಿನ ನಿರ್ಮಲಾ(ಹೆಸರು ಬದಲಾಯಿಸಲಾಗಿದೆ) ಎಂಬುವವರು ಬಾಯಿಯ ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಕ್ಯಾನ್ಸರ್ ಹುಣ್ಣುಗಳು ಗಂಟಲು, ಅನ್ನನಾಳವನ್ನು ವ್ಯಾಪಿಸಿದ್ದವು. ವೈದ್ಯರು ಅವರ ರೋಗ ಅಂತಿಮ ಸ್ಥಿತಿಯಲ್ಲಿದೆ; ಆಕೆ ಬದುಕುವುದು ಸಂಶಯ ಎಂದಿದ್ದರು. ಕೊನೆಗೆ ಯಾರೋ ಒಬ್ಬರು ವೈದ್ಯರ ಸಲಹೆಯ ಮೇರೆಗೆ, ನಿರ್ಮಲಾ ಗೋಮೂತ್ರದಿಂದ ತಯಾರಿಸಿದ ಅರ್ಕವನ್ನು ಉಪಯೋಗಿಸಲಾರಂಭಿಸಿದರು. ಯಮಲೋಕದ ಬಾಗಿಲು ತಟ್ಟುತ್ತಿದ್ದ ನಿರ್ಮಲಾರನ್ನು ಗೋ ಅರ್ಕ ಹಿಂದಕ್ಕೆ ಕರೆತಂದಿದೆ. ಆಶ್ಚರ್ಯವಾಗುತ್ತಿದೆಯಲ್ಲವೇ? ಇಂದು ಆಕೆ ಸಂಪೂರ್ಣ ಗುಣಮುಖರಾಗಿದ್ದಾರೆ.

ಗೋ ಅರ್ಕವನ್ನು ಸೇವಿಸಿದುದರಿಂದ ರಕ್ತದೊತ್ತಡ, ಮಧುಮೇಹಗಳು ನಿಯಂತ್ರಣದಲ್ಲಿವೆ ಎಂದು ಅದರ ಉಪಯೋಗ ಪಡೆದುಕೊಂಡ ಅನೇಕರು ಹೇಳುತ್ತಾರೆ. ಗೋಅರ್ಕ ಸೇವಿಸಿದುದರಿಂದ ಮುಖದಲ್ಲಿ ಮೊಡವೆಗಳ ಹಾವಳಿ ಕಡಿಮೆಯಾಗಿದೆ ಎಂಬುದು ಕೋಮಲಾಂಗಿಯರ ಹೇಳಿಕೆ. ಗೋಮೂತ್ರದಿಂದ ತಯಾರಿಸಿದ ಅರ್ಕ; ಕ್ಯಾನ್ಸರ್ ರೋಗ ನಿವಾರಕ ಎಂದು ನಮ್ಮ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ಅಂಗೀಕೃತವಾಗಿದೆ; ಜೊತೆಗೆ ಲೀಟರ್‌ಗೆ ೬ ರೂ.ಗಳಂತೆ ಮಾರಾಟವಾಗುತ್ತಿದೆ.

ಗೋಮೂತ್ರ ಹಾಗೂ ಗೋಮಯದಿಂದ ತಯಾರಿಸಿದ ಶ್ಯಾಂಪೂ ಬಹಳ ಉಪಯುಕ್ತವಾಗಿದೆ. ಅದನ್ನು ಉಪಯೋಗಿಸುವುದರಿಂದ ತಲೆಹೊಟ್ಟು, ಕೂದಲಿನ ಸೀಳುವಿಕೆ ಕಡಿಮೆಯಾಗುತ್ತದೆ; ಜೊತೆಗೆ ಕೆಂಬಣ್ಣಕ್ಕೆ ತಿರುಗುತ್ತಿರುವ ಕೂದಲು ಕಪ್ಪಾಗುತ್ತದೆ. ಇದು ನನ್ನ ಸ್ವಂತ ಅನುಭವ. ಗೋಮಯದಿಂದ ತಯಾರಿಸಿರುವ ಸಾಬೂನು ಅನೇಕ ಚರ್ಮರೋಗಗಳ ನಿವಾರಣೆಯಲ್ಲಿ ಹಾಗೂ ತಡೆಗಟ್ಟುವಿಕೆಯಲ್ಲಿ ಸಹಕಾರಿಯಾಗಿದೆ. ಗೋಮಯದಿಂದ ತಯಾರಿಸಲಾಗಿರುವ ದಂತಮಂಜನ ಒಸಡುಗಳಲ್ಲಿನ ರಕ್ತಸ್ರಾವವನ್ನೂ, ದಂತಕುಳಿಯನ್ನೂ ಕಡಿಮೆಗೊಳಿಸುತ್ತದೆ. ಗೋಮಯದಿಂದ ವಿಭೂತಿ, ಗಂಧದ ಕಡ್ಡಿಗಳನ್ನು ತಯಾರಿಸುತ್ತಾರೆ. ಇವುಗಳು ಅತ್ಯಂತ ಸುಗಂಧಭರಿತವಾಗಿವೆ.

ನಾನು ಇಲ್ಲಿ ಗೋವವಿನ ಉತ್ಪನ್ನಗಳಿಗೆ ಜಾಹೀರಾತು ನೀಡುತ್ತಿದ್ದೇನೆ ಎಂದು ಭಾವಿಸಬೇಡಿ. ಉಪಯೋಗ ಪಡೆದುಕೊಂಡವರ ಮಾತುಗಳಿಗೆ ಅಕ್ಷರಗಳ ರೂಪವನ್ನು ನೀಡುವ ಪ್ರಯತ್ನವನ್ನಷ್ಟೇ ಇಲ್ಲಿ ಮಾಡಲಾಗಿರುವುದು.

ಗೋವುಗಳು ಗಾಗತಿಕ ತಾಪಮಾನದ ಹೆಚ್ಚಳಕ್ಕೆ ಕಾರಣವಾಗುತ್ತವೆಎಂಬುದನ್ನು ಸಂಶೋಧನೆಗಳು ದೃಢಪಡಿಸಿವೆ ಎಂಬ ಲೇಖನವನ್ನು ಎಲ್ಲಿಯೋ ಓದಿದ ನೆನಪು. ಆದರೆ ಮಾನವ ಕಾರಣವಾಗುವಷ್ಟು ಗೋವುಗಳು ಖಂಡಿತಾ ಕಾರಣವಾಗಲಾರವು. ಗೋವುಗಳು ಮೆಲುಕು ಹಾಕುವಾಗ ಉತ್ಪತ್ತಿಯಾಗುವ ಮೀಥೇನ್ ಅನಿಲ ಜಾಗತಿಕ ತಾಪಮಾನದ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಸಂಶೋಧನೆಗಳು ಹೇಳುತ್ತವೆ. ಆದರೆ ಮನುಷ್ಯನ ಕಾರ್ಯಚಟುವಟಿಕೆಗಳಿಂದ, ಆತನ ಹೊಸ ಹೊಸ ಅನ್ವೇಷಣೆಗಳ ಕೂಸುಗಳಿಂದ ಉತ್ಪತ್ತಿಯಾಗುವ ಮೀಥೇನ್ ಅನಿಲಕ್ಕೆ ಹೋಲಿಸಿದರೆ, ಗೋವುಗಳು ಮೆಲುಕು ಹಾಕುವಾಗ ಉತ್ಪತ್ತಿಯಾಗುವ ಮೀಥೇನ್ ಅನಿಲದ ಪ್ರಮಾಣ ಅತಯಂತ ಕಡಿಮೆ. ಪರಿಸರದ ಮಲಿನತೆಗೆ ಮನುಷ್ಯ ನೀಡುವಷ್ಟು ಕೊಡುಗೆಯನ್ನು ಬೇರೆ ಯಾವ ಜೀವಿಯೂ ನೀಡಲಾರದು.

ಹಸುಗಳಿಗೆ ವಯಸ್ಸಾದಾಗ, ಅವುಗಳ ಸಂತಾನೋತ್ಪತ್ತಿ ಕಾಲ ಮುಗಿದಾಗ, ನಾವು ಅವುಗಳನ್ನು ಖಸಾಯಿಕಾನೆಗಳಿಗೆ ಒಪ್ಪಿಸುತ್ತೇವೆ. ಜೀವಂತ ಹಸುಗಳ ಮೈಗೆ ಬಿಸಿ ನೀರು ಸುರಿದು, ಧರ್ಮ ಸುಲಿದು ಕೈಚೀಲ, ಚಪ್ಪಲಿಗಳನ್ನು ತಯಾರಿಸಿ ಮೆರೆಯುತ್ತೇವೆ. ಹಸುಗಳ ಆ ಪರಿಸ್ಥಿತಿ ನಮಗೆ ಬಂದೊದಗಿದರೆ ಹೇಗಿರಬಹುದು?

ಗೋಮಾಂಸವನ್ನು ತಿನ್ನದೆ ಬದುಕಲು ಮಾನವನಿಂದ ಸಾಧ್ಯವಿದೆ; ಆದರೆ ಗೋವಿನ ಹಾಲು ಕುಡಿಯದೆ ಬದುಕಲು, ಹಾಲಿನಿಂದ ತಯಾರಿಸಿದ ಉತ್ಪನ್ನಗಳನ್ನು ಉಪಯೋಗಿಸದೆ ಬದುಕಲು ಸಾಧ್ಯವಿದೆಯೇ? ಯಾರಾದರೂ ನಾವು ಕೇವಲ ಗೋಮಾಂಸವನ್ನು ತಿಂದು, ಗೋವಿನ ಹಾಲು ಕುಡಿಯದೆ ಹಾಲಿನಿಂದ ತಯಾರಿಸಿದ ಉತ್ಪನ್ನಗಳನ್ನು ಉಪಯೋಗಿಸದೆ ಬದುಕುತ್ತೇವೆ ಎಂದು ಹೇಳಲಿ, ನೋಡೋಣ!

ಉಪಯೋಗವಿದ್ದಾಗ ಉಪಯೋಗಿಸಿಕೊಂಡು, ಬೇಡವಾದಾಗ ಬಿಸಾಕುವ ಹೀನರು ಮಾನವರು! ನಮ್ಮದು ಬಡದೇಶ, ಅವುಗಳಿಂದ (ಗೋವು) ಯಾವುದೇ ಉತ್ಪತ್ತಿ ಇಲ್ಲದಾದಾಗ ಅವುಗಳನ್ನು ಸಾಕುವ ಖರ್ಚನ್ನು ನಿಭಾಯಿಸುವುದು ಹೇಗೆ? ಎಂಬ ಪ್ರಶ್ನೆ ಏಳುವುದು ಸಹಜ. ಆದರೆ ನಮಗೂ ವಯಸ್ಸಾದಾಗ ದೇಹ ಕಾಯಿಲೆಗಳ ಗೂಡಾದಾಗ ನಮ್ಮಿಂದಲೂ ಯಾವುದೇ ಉಪಯೋಗವಿಲ್ಲ. ಆಗ ನಮ್ಮ ಮಕ್ಕಳೂ ಔಷಧೋಪಚಾರಗಳ ಖರ್ಚನ್ನು ನಿಭಾಯಿಸಲು ಸಾಧ್ಯವಿಲ್ಲ ಎಂದು ನಮ್ಮನ್ನೂ ಖಸಾಯಿಖಾನೆಗೆ ಒಪ್ಪಿಸಿದರೆ ಪರಿಸ್ಥಿತಿ ಹೇಗಿರಬಹುದು? ಒಂದು ಕ್ಷಣ ಯೋಚಿಸಿ ನೋಡಿ. ಈ ಪ್ರಶ್ನೆಗೆ ನಮ್ಮಲ್ಲಿ ಉತ್ತರವಿದೆಯೇ?


ಗೋವಿಗೆ ವಯಸ್ಸಾದರೂ, ಅದರಿಂದ ದೊರೆಯುವ ಸಂಜೀವಿನಿಯಾದ ಗೋಮೂತ್ರ ಹಾಗೂ ಗೋಮಯ ದೊರೆತೇ ದೊರೆಯುತ್ತದೆ. ಗೋವು ತನ್ನ ಹುಟ್ಟಿನಿಂದ ಸಾವಿನವರೆಗೂ ಕಾಮಧೇನುವಾಗಿ ಮನುಷ್ಯನ ಹಡಚ್ಚಿನ ಆವಶ್ಯಕತೆಗಳನ್ನು ಪೂರೈಸುತ್ತದೆ.

ವಿಷವ ಕಕ್ಕುವ ನರನ ಕ್ಷಮಿಸಿ
ಅಮೃತವೀವ ತಾಯಿ ನೀ
ತಾಳ್ಮೆ ಕ್ಷಮಾ ಸಹನವಾಹಿನಿ
ಗೋ ಮಾತೆ ನೀ ಸಂಜೀವಿನಿ

ಆದುದರಿಂದ ಗೋವಿನ ಸಂರಕ್ಷಣೆ ಜಗತ್ತಿನ ಮಾನವರೆಲ್ಲರ ಹೊಣೆಯಾಗಬೇಕು. ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿರುವ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಗಳಿಗೆ ನಮ್ಮ ನುಡಿ ನಮನಗಳನ್ನು ಸಲ್ಲಿಸಲೇಬೇಕು. ಧರಣಿ ಮಂಡಲದ ಸಂಜೀವಿನಿಯ ಅಳಿವು-ಉಳಿವು ಮಾನವರ ಕೈಯಲ್ಲಿದೆ. ಗೋವಿಲ್ಲದ ಪ್ರಪಂಚವನ್ನು, ಬದುಕನ್ನು ಊಹಿಸಿಕೊಳ್ಳುವುದೂ ಅಸಾಧ್ಯ.

"ಗಾವಃ ವಿಶ್ವಸ್ಯ ಮಾತರಃ"

**- ಶೋಭನಾ ಯರ್ಮುಂಜ**



# ಗೋವಿನ ಸುತ್ತ...... ಮುಗಿಯದ ವೃತ್ತ

**ಕಾಮಧೇನುವೇ ಕಲ್ಪವೃಕ್ಷವಾಗಿ, ಇಂದಿನ ಕೈಗಾರಿಕೆಗಳಲ್ಲಿ, ಔಷಧ ಉದ್ಯಮಗಳಲ್ಲಿ, ಸುಗಂಧ ದ್ರವ್ಯ ತಯಾರಿಕೆಯಲ್ಲಿ, ಸುರೂಪಿ ಚಿಕಿತ್ಸೆಯಲ್ಲಿ, ಯಂತ್ರೋಪಕರಣಗಳಲ್ಲಿ, ಬಣ್ಣದ ಫ್ಯಾಕ್ಟರಿಗಳಲ್ಲಿ, ಚಿತ್ರೋದ್ಯಮದಲ್ಲಿ ಕೊನೆಗೆ ಕಟ್ಟಡ ಸಾಮಗ್ರಿಗಳಲ್ಲಿ ಹೇಗೆ ಹಾಸು ಹೊಕ್ಕಾಗಿ ಬಳಕೆಯಾಗುತ್ತಿದೆ ಎಂಬುದರ ಸಂಕ್ಷಿಪ್ತ ಚಿತ್ರಣ**

ಬಾಯಲ್ಲಿ ಚ್ಯೂಯಿಂಗ್ ಗಮ್ ಅಗಿಯುತ್ತ ನೀವು ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಮಬ್ಬುಗತ್ತಲಲ್ಲಿ ವೇಗವಾಗಿ ಕಾರಿನಲ್ಲಿ ಧಾವಿಸುತ್ತಿದ್ದೀರಿ. ಎದುರಿಗೆ ಏನೋ ಅಸ್ಪಷ್ಟ ಆಕೃತಿ ಕಂಡಂತಾಗಿ ಹಠಾತ್ ಬ್ರೇಕ್ ಹಾಕುತ್ತೀರಿ. ಕಿರ್ರೆಂದು ಕಿರುಚುತ್ತ ಕಾರಿನ ಚಕ್ರಗಳು ರಸ್ತೆಯ ನಡುವೆ ಮಲಗಿರುವ ಹಸುವಿನ ಒಂದಡಿ ದೂರದಲ್ಲಿ ನಿಲ್ಲುತ್ತವೆ. ಅಬ್ಬ, ಪುಣ್ಯಕೋಟಿಯ ಪುಣ್ಯ ಎಂದುಕೊಂಡು ನೀವು ಮೆಲ್ಲನೆ ಸುತ್ತು ಬಳಸಿ, ನಗರ ಸಭೆಯ ಆಡಳಿತವನ್ನು ಬಯ್ದುಕೊಳ್ಳುತ್ತ ಮುಂದೆ ಸಾಗುತ್ತೀರಿ.

ಆ ಹಸುವಿನ ಪ್ರಾಣ ಉಳಿಸಲು ಕಾರಣವಾಗಿದ್ದು ನಿಮ್ಮ ಕಾರಿನ ದಕ್ಷ ಬ್ರೇಕ್. ಅದು ಅಷ್ಟು ದಕ್ಷತೆಯಿಂದ ಕೆಲಸ ಮಾಡಲು ಕಾರಣ ಏನೆಂದರೆ ಅದರಲ್ಲಿರುವ ಬ್ರೇಕ್ ಫ್ಲುಯಿಡ್. ಅಂದರೆ, ಬ್ರೇಕ್ ಸಿಲಿಂಡರಿನಲ್ಲಿ ತುಂಬಿಕೊಂಡಿರುವ ಎಣ್ಣೆಯಂಥ ದ್ರವ.

ಆ ದ್ರವ ತಯಾರಾಗಿದ್ದು ಅದೆಷ್ಟೊ ಮೃತ ದನಗಳ ಶರೀರದಿಂದ ಪಡೆದ ಕೊಬ್ಬಿನ ಆಮ್ಲ. ಇಂದು ಜೀವಂತ ದನವನ್ನು ಉಳಿಸಿದ್ದು ಎಂದೋ ಸತ್ತು ಹೋದ ಇನ್ಯಾವುದೋ ದನ!

ಕಾರು ಆ ಕ್ಷಣದಲ್ಲಿ ನಿಲ್ಲಲು ಬ್ರೇಕ್ ಎಣ್ಣೆಯೊಂದೇ ಕಾರಣವಲ್ಲ, ಕಾರಿನ ಟಯರ್ ಕೂಡ ಅಷ್ಟೇ ಮುಖ್ಯ ಅಂತೀರಾ? ಹೌದು. ಆದರೆ ಕಾರಿನ ರಬ್ಬರಿಗೆ ವಿಶೇಷ ಹಿಡಿತಗುಣ ಬರುವಂತೆ ಮಾಡುವಲ್ಲಿ ಸ್ಟೀಯರಿಕ್ ಆಸಿಡ್ ಎಂಬ ರಸಾಯನವನ್ನು ಸೇರಿಸಿರುತ್ತಾರೆ. ಅದನ್ನು ದನದ ಕೊಬ್ಬಿನ ಎಣ್ಣೆಯಿಂದಲೇ ತಯಾರಿಸಿರುತ್ತಾರೆ.

ಸರಿ! ಬ್ರೇಕು, ಟಯರು.... ಇನ್ನೇನು ರಸ್ತೆಗೆ ಹಾಕಿದ ಡಾಂಬರಿನಲ್ಲೂ ದನದ ಅಂಶ ಇದೆ ಅಂತೀರೇನೊ ಎಂದು ರೇಗಿ ಹೊರಡಬೇಡಿ. ನಂಬಿದರೆ ನಂಬಿ, ರಸ್ತೆಗೆ ಹಾಕುವ ಟಾರ್‌ನಲ್ಲೂ ದನದ ಕೊಬ್ಬನ್ನು ಸೇರಿಸಿರುತ್ತಾರೆ!

ನಿಲ್ಲಿ ಇಲ್ಲಿಗೇ ನಿಂತಿಲ್ಲ.

ಮತ್ತೆ ನೀವು ಅಗಿಯುತ್ತಿದ್ದ ಚ್ಯೂಯಿಂಗ್ ಗಮ್ ಕೂಡ ಅಂಥದೇ ಮೃತ ದನದ ದೇಹದಿಂದ ಪಡೆದ ಕೊಲಾಜೆನ್ ಎಂಬ ದ್ರವ್ಯದ್ದೇ ಆಗಿದ್ದಿರಬಹುದು. ಅದರಲ್ಲಿ ವೆನಿಲ್ಲಾ ಸುಗಂಧವೂ ಇದ್ದರಂತೂ ಬಿಡಿ. ಮೊನ್ನೆ ತಾನೇ ಸುದ್ದಿಯಲ್ಲಿತ್ತಲ್ಲ, ಜಪಾನೀ ವಿಜ್ಞಾನಿಯೊಬ್ಬಳು ದನದ ಸೆಗಣಿಯನ್ನೇ ಸಂಸ್ಕರಿಸಿ ಕೃತಕ ವೆನಿಲ್ಲಾ ಪರಿಮಳವನ್ನು ಪಡೆಯಲು ಸಾಧ್ಯವೆಂದು ತೋರಿಸಿದ್ದು? ಆಕೆಗೆ ಆ ಸಾಧನೆಗೆ 'ಇಗ್ ನೊಬೆಲ್' ಪ್ರಶಸ್ತಿ ಸಿಕ್ಕಿದ್ದು?

ಇದು ಬರೀ ಆರಂಭ ಅನ್ನಿ. ಇಂದಿನ ಕೈಗಾರಿಕೆಯ ಯುಗದಲ್ಲಿ ಗೋಪುರಾಣ ಎಂಬುದು ಹೇಳಿದಷ್ಟೂ ಮುಗಿಯಲಾರದಷ್ಟಿದೆ. ಎಲ್ಲಿಂದ ಆರಂಭಿಸೋಣ?

**ಗೋವು ಬದುಕಿದ್ದಾಗ ಏನೆಲ್ಲ ಉಪಕಾರ ಮಾಡುತ್ತದೆಂದು ನಮಗೆ ಗೊತ್ತು. ಅದರ ಚರ್ವಿತ ಚರ್ವಣ ಬೇಡ.**

ಪಾಶ್ಚಾತ್ಯ ದೇಶಗಳಲ್ಲಿ ಗೋಸಂಗೋಪನೆ ಎಂಬುದು ಒಂದು ದೊಡ್ಡ ಉದ್ಯಮವಾಗಿದೆ. ಒಂದೊಂದು ರ್‍ಯಾಂಚ್‌ನಲ್ಲಿ ಅನೇಕ ಸಾವಿರ ದನಗಳಿರುತ್ತವೆ. ಅಮೆರಿಕದ ಡಿಮಾಯ್ನ್ ನಗರದ ಹೊರವಲಯದಲ್ಲಿ ನಾನು ಭೇಟಿ ನೀಡಿದ್ದ ಒಂದು ರ್‍ಯಾಂಚ್‌ನಲ್ಲಿ ಮೂರುವರೆ ಸಾವಿರ ದನಗಳಿದ್ದವು. ಅಲ್ಲಿ ದಿನವೂ ನೂರಾರು ಗರ್ಭಿಣಿ ದನಗಳು ಕರು ಹಾಕುತ್ತಿರುತ್ತವೆ. ಆಗ ಗರ್ಭದಿಂದ ಹೊರ ಬೀಳುವ ಸೆತ್ತೆಗಳನ್ನು ಸಂಗ್ರಹಿಸಿ ಅದರಿಂದ ನಾನಾ ಬಗೆಯ ಔಷಧ ದ್ರವ್ಯಗಳನ್ನೂ ಶೃಂಗಾರ ಪರಿಕರಗಳನ್ನೂ ತಯಾರಿಸುತ್ತಾರೆ. ಅದನ್ನೂ ನಾವಿಲ್ಲಿ ಚರ್ಚೆಗೆ ಎತ್ತಿಕೊಳ್ಳುವುದು ಬೇಡ.

ದನವೊಂದು ಸತ್ತ ನಂತರ ಏನೇನು ಸಿಗುತ್ತದೆ ಎಂಬಲ್ಲಿಂದ ನೋಡೋಣ:

'ಬಳಸಿದ್ದನ್ನೇ ಮತ್ತೆ ಬಳಸಿ; ಬಿಸಾಕುವ ಬದಲು ಮರುಬಳಕೆ ಮಾಡಿ' ಎಂಬುದು ವೇದ ಮಂತ್ರದಷ್ಟೇ ಮಹತ್ವದ ಸಂದೇಶವಾಗುತ್ತಿರುವ ಯುಗದಲ್ಲಿ ನಾವಿದ್ದೇವೆ. ಅಂಥ ಮರುಬಳಕೆಯ ಪರಮೋಚ್ಚ ಉದಾಹರಣೆ ಎಂದರೆ ನಾವು ಹಿಂದೂಗಳು ಪೂಜಿಸುವ ಗೋವು. ಭಾರತದ ಸಾಂಪ್ರದಾಯಿಕ ಸಮುದಾಯದಲ್ಲಿ ಗೋವುಗಳ ಮರುಬಳಕೆ ಎಂದರೆ ನಮಗೆ ಗೊತ್ತಿರುವುದು ಇಷ್ಟೆ:

ಒಂದು ಹಸು ಅಥವಾ ಎತ್ತು ಸತ್ತರೆ ಅದರ ಚರ್ಮವನ್ನು ಸುಲಿದು ಯಾರೋ ಪಾದರಕ್ಷೆ, ಬೆಲ್ಟ್ ಇತ್ಯಾದಿ ಮಾಡಲೆಂದು ಒಯ್ಯುತ್ತಾರೆ. ದನಗಳ ಗೊರಸು, ಕೋಡುಗಳಿಂದಲೇ 'ಜೆಲ್ಲಿ' ಎಂಬ ಅಂಟು ಪದಾರ್ಥವನ್ನು ತಯಾರಿಸುತ್ತಾರೆ ಅನ್ನೋದು ಗೊತ್ತಿತ್ತು. ಅದು ಬಿಟ್ಟರೆ ಈಚೆಗೆ ಬೆಂಗಳೂರಿನ ಬಳಿ ಎಲ್ಲೋ 'ಬೋನ್ ಮೀಲ್' ಎಂಬ ಫ್ಯಾಕ್ಟರಿ ಆರಂಭವಾಗಿದೆಯಂತೆ; ಅದರಲ್ಲಿ ದನಗಳ ಮೂಳೆಯನ್ನು ಪುಡಿಮಾಡಿ ಗೊಬ್ಬರಕ್ಕೋ ಇನ್ಯಾವುದಕ್ಕೊ ಬಳಸುತ್ತಾರಂತೆ. ಅದಂತೆ ಇದಂತೆ.

ಅಲ್ಲಿಂದಾಚೆ ಏನು?

ಇಂಗ್ಲ್ಯಂಡಿನಲ್ಲಿ ದನಗಳಿಗೆ ಸಿಜೆಡಿ ಅಂದರೆ ಹುಚ್ಚು ಹಸು ರೋಗ ಕಾಣಿಸಿಕೊಂಡಾಗ ಅದೆಂಥದೊ ಮಹಾ ಪಿಡುಗು ಬಂದಂತೆ ಪಾಶ್ಚಾತ್ಯ ಜಗತ್ತು ತತ್ತರಿಸಿತು. ಗೋಮಾಂಸವನ್ನು ತಿಂದ ಕೆಲವರು ಅದೇ ರೋಗದಿಂದ ನರಳಿ ಸತ್ತಿದ್ದೂ ಬೆಳಕಿಗೆ ಬಂತು. ಅದಕ್ಕೇ ಆರೆಂಟು ಲಕ್ಷ ಗೋವುಗಳನ್ನು ವಧೆ ಮಾಡಿ, ಜಗತ್ತಿಗೆಲ್ಲ ಗೊತ್ತಾಗುವಂತೆ ಟಿವಿ ಕ್ಯಾಮರಾ ಎದುರೇ ಸುಟ್ಟು ಹೂಳಲಾಯಿತು. ಇಂದು ದನವನ್ನು ಬೇರೆ ಯಾವ ಯಾವ ರೂಪಗಳಲ್ಲಿ ನಾವು ಬಳಸುತ್ತಿದ್ದೇವೆ ಎಂಬುದರ ಉದ್ದುದ್ದ ಪಟ್ಟಿಗಳೇ ಆ ಸಂದರ್ಭದಲ್ಲಿ ಚರ್ಚೆಗೆ ಬಂದವು. ಅವುಗಳಿಂದ ಸಂಗ್ರಹಿಸಿದ ಮಾಹಿತಿಗಳಲ್ಲಿ ಕೆಲವು ಮಾತ್ರ ಇಲ್ಲಿವೆ:

ಉದಾಹರಣೆಗೆ, ದನಗಳ ಶ್ವಾಸಕೋಶ ಮತ್ತು ಶ್ವಾಸನಾಳದ ಒಳ ಪೊರೆಯಿಂದ ಹೆಪಾರಿನ್ ಎಂಬ ಔಷಧವನ್ನು ತಯಾರಿಸುತ್ತಾರೆ. ರಕ್ತ ಗರಣೆಗಟ್ಟದ ಹಾಗೆ ತಡೆಯಲು, ವಿಶೇಷವಾಗಿ ಗ್ಯಾಂಗ್ರೀನ್ ಆಗದಂತೆ ತಡೆಯಲು ಈ ಔಷಧ ಬಳಕೆಯಾಗುತ್ತದೆ. ದನದ ಅಡ್ರಿನಾಲಿನ್ ಗ್ರಂಥಿಗಳಿಂದ ಸ್ಟಿರಾಯಿಡ್‌ಗಳನ್ನು ತೀವ್ರ ಅಸ್ತಮಾದಂಥ ಕಾಯಿಲೆಗಳ ಉಪಶಮನಕ್ಕೆ ಬಳಸುತ್ತಾರೆ. ಇದೇ ಗ್ರಂಥಿಗಳಿಂದ ಎಪಿನೆಫ್ರಿನ್ ಎಂಬ ಔಷಧವನ್ನು ಉತ್ಪಾದಿಸಿ ಅದನ್ನು ರಕ್ತದ ಒತ್ತಡವನ್ನು ಹೆಚ್ಚಿಸಲು ಬಳಸುತ್ತಾರೆ. ಹೃದ್ರೋಗ ಚಿಕಿತ್ಸೆಗಂತೂ ಇದು ಬೇಕೇ ಬೇಕು. ದನದ ಯಕೃತ್ತಿನಿಂದ ಬಿ–೧೨, ಲಿವರ್ ಎಕ್ಸ್‌ಟ್ರ್ಯಾಕ್ಟ್ ಔಷಧಗಳು ತಯಾರಾಗುತ್ತವೆ. ಹಾಗೆಯೇ ಮಧುಮೇಹಿಗಳಿಗೆ ಬೇಕಾದ ಇನ್ಸೂಲಿನ್ನನ್ನು ದನಗಳ ಮೇಧೋಜೀರಕ ಗ್ರಂಥಿಗಳಿಂದ ಪಡೆಯಲಾಗುತ್ತದೆ. ಇನ್ನು ಕೀಲುನೋವು, ಸಂಧಿವಾತದಿಂದ ಬಳಲುವವರಿಗೆ ಕೊಡುವ ಕೊಂಡ್ರಾಯಿಟಿನ್ ಸಲ್ಫೇಟ್ ಎಂಬ ಔಷಧವನ್ನು ದನದ ಮೂಗಿನ ಹೊರಳೆಗಳ ನಡುವಣ ಮೃದ್ವಸ್ಥಿಯಿಂದಲೇ ತಯಾರಿಸುತ್ತಾರೆ. ದನದ ಮಿದುಳಿನ ದಟ್ಟ ನಾರಿನಂಥ ಹೊರಗವಚವನ್ನು (ಡ್ಯುರಾ ಮೇಟರ್) ಮನುಷ್ಯರ ಮಿದುಳಿನ ಶಸ್ತ್ರಚಿಕಿತ್ಸೆ ಮಾಡುವಾಗ ತಲೆಬುರುಡೆಯ ಖಾಲಿ ಜಾಗವನ್ನು ತುಂಬಲು ಬಳಸಲಾಗುತ್ತದೆ.

ದನದ ಕರುಳನ್ನು ಉಪ್ಪಿನಲ್ಲಿ ಒಣಗಿಸಿ ಕೊಳವೆಯಂತೆ ಕತ್ತರಿಸಿ ಅದರಲ್ಲಿ ಮಸಾಲೆ ಮಾಂಸ ತುಂಬಿ ಕರಿದು 'ಸಾಸೇಜ್' ಎಂಬ ತಿಂಡಿಯನ್ನು ತಯಾರಿಸಲಾಗುತ್ತದೆ. ಕರುಳನ್ನು ದಾರದಂತೆ ಸೀಳಿ, ಗಾಯಕ್ಕೆ ಹೊಲಿಗೆ ಹಾಕುವ ದಾರವನ್ನಾಗಿ ಬಳಸಲಾಗುತ್ತದೆ.

ದನಗಳ ಪಿತ್ತಕೋಶದ ಕಲ್ಲುಗಳನ್ನು ಪಾಲಿಶ್ ಮಾಡಿ ಆಭರಣ ತಯಾರಕರು ಹರಳುಗಳಂತೆ ಕೂರಿಸುತ್ತಾರೆ. ಪ್ಲೈವುಡ್‌ನಲ್ಲಿ ಕಟ್ಟಿಗೆಯ ತೆಳು ಹಾಳೆಗಳನ್ನು ಅಂಟಿಸಲು ದನಗಳ ರಕ್ತವನ್ನು ಗೋಂದಿನಂತೆ ಸಾಂದ್ರೀಕರಿಸಿ ಬಳಸುತ್ತಾರೆ. ಕಟ್ಟಡಗಳಿಗೆ ಬೆಂಕಿ ಬಿದ್ದಾಗ ಉಪಯೋಗಿಸುವ ಅಗ್ನಿಶಾಮಕ ನೊರೆಯನ್ನೂ ದನಗಳ ರಕ್ತದ ಪುಡಿಯಿಂದಲೇ ತಯಾರಿಸಲಾಗುತ್ತದೆ. ಮಿಕ್ಕಿದ ಪುಡಿ ರಸಗೊಬ್ಬರದ ಉತ್ಪಾದನೆಗೆ ಹೋಗುತ್ತದೆ. ಕೃಷಿ ಕೆಲಸದಲ್ಲಿ ದುಡಿಯುವ ಮಹಿಳೆ ತೀರ ದುರ್ಬಲಳಾಗಿದ್ದರೆ ಅನೀಮಿಯಾ ಕಾಯಿಲೆ ಇದೆಯೆಂದು ಡಾಕ್ಟರು ಬರೆದುಕೊಡುವ ಐರನ್ ಟ್ಯಾಬ್ಲೆಟ್‌ಗೂ ದನದ ರಕ್ತವೇ ಮೂಲದ್ರವ್ಯ.

ದನಗಳ ಎಲುಬಿನ ಪುಡಿಯಿಂದಲೇ ಸಕ್ಕರೆಗೆ ಅಚ್ಚ ಬಿಳಿಬಣ್ಣ ಬರುತ್ತದೆ. ಪಿಂಗಾಣಿ ವಸ್ತುಗಳ ತಯಾರಿಕೆಯಲ್ಲೂ ಇದು ಬೇಕೇ ಬೇಕು. ಅತ್ಯಚ್ಚ ಗುಣಮಟ್ಟದ ವಿಶೇಷ ಉಕ್ಕಿನ ತಯಾರಿಕೆಗೆ ಮೂಳೆಪುಡಿಯನ್ನು ಸೇರಿಸಬೇಕಾಗುತ್ತದೆ. ಎಲುಬಿನಿಂದ ತಯಾರಿಸಲಾದ ಬಟನ್‌ಗಳಿಗೆ ಈ ಪ್ಲಾಸ್ಟಿಕ್ ಯುಗದಲ್ಲೂ ಬೇಡಿಕೆ ಇದೆ.

ದನಗಳ ಎಲುಬು ಮತ್ತು ಕೊಬ್ಬು ಎರಡರಿಂದಲೂ ಟ್ಯಾಲೊ ಎಂಬ ವಿಶೇಷ ಬಗೆಯ ಎಣ್ಣೆಯನ್ನು ತೆಗೆಯುತ್ತಾರೆ. ಭಕ್ಷಣೆಗೆ ಯೋಗ್ಯವಲ್ಲದ ಟ್ಯಾಲೊ ಎಣ್ಣೆಯನ್ನು ಬ್ರೇಕ್ ದ್ರವ ಮತ್ತು ಜೆಟ್ ವಿಮಾನಗಳ ಕೀಲೆಣ್ಣೆಯನ್ನು ಉತ್ಪಾದನೆಗೆ ಕಚ್ಚಾ ಪದಾರ್ಥವಾಗಿ ಬಳಸುತ್ತಾರೆ. ಮೋಂಬತ್ತಿಗೆ ಇದೇ ಮೂಲವಸ್ತು. ನಟನಟಿಯರು ಕೃತಕ ಕಣ್ಣೀರು ಹರಿಸಲೆಂದು ಬಳಿದುಕೊಳ್ಳುವ ಗ್ಲಿಸರೀನ್ ಕೂಡ ಇದೇ ಟ್ಯಾಲೊದಿಂದಲೇ ಬರುತ್ತದೆ. ಇದರಿಂದ ಸಾಬೂನು, ಡಿಟರ್ಜಂಟ್‌ಗಳೂ ತಯಾರಾಗುತ್ತವೆ. ವಿವಿಧ ಬಗೆಯ ಕಿವಿಗೆ ಹಾಕುವ ಹನಿಗಳು, ಕಣ್ಣಿಗೆ ಹಾಕುವ ಹನಿಗಳು, ಕೆಮ್ಮಿನ ಔಷಧಗಳು, ಹೇರ್ ಕಂಡೀಶನರ್‌ಗಳು, ಶಾಂಪೂಗಳು ಎಲ್ಲವಕ್ಕೂ ಗ್ಲಿಸರೀನೇ ಮೂಲದ್ರವ್ಯ. ಇದರಿಂದಲೇ ಬಣ್ಣ ಬಣ್ಣದ ಇಂಕು, ಕಾರುಗಳ ಪೇಂಟ್ ಮೇಲೆ ಹಚ್ಚುವ ಪಾಲಿಶ್‌ಗಳು, ಕಾರಿನ ಇಂಧನ ಚಳಿಯಲ್ಲೂ ಹೆಪ್ಪುಗಟ್ಟದಂತೆ ನೋಡಿಕೊಳ್ಳುವ ಆಂಟಿಫ್ರೀಝ್ ಮಿಶ್ರಣಗಳು ಎಲ್ಲವಕ್ಕೂ ಗ್ಲಿಸರೀನ್ ಬೇಕು.

ಕಣ್ಣೀರು ಹಾಗಿರಲಿ, ಸಹಜ ನೀರೂ ತೊಟ್ಟಿಕ್ಕದಂತೆ ವಾಟರ್ ಪ್ರೂಫಿಂಗ್ ಅಂಟುಗಳ ತಯಾರಿಕೆಗೂ ಕಚ್ಚಾ ಟ್ಯಾಲೊ ಬಳಕೆಯಾಗುತ್ತದೆ. ಆಹಾರವಸ್ತುಗಳನ್ನು ಪ್ಯಾಕಿಂಗ್ ಮಾಡಲು ಬೇಕಾದ ವಿಶೇಷ ಬಗೆಯ ಎಣ್ಣೆಕಾಗದವೂ ಇದರಿಂದಲೇ ತಯಾರಾಗುತ್ತದೆ. ನಾನಾ ಬಗೆಯ ಆಂಟಿಬಯಾಟಿಕ್ ಔಷಧಗಳೂ ಕೂಡ.

ಇನ್ನು ಮೂಳೆ, ಗೊರಸು ಮತ್ತು ಕೊಂಬುಗಳನ್ನು ಕಾಯಿಸಿದಾಗ ಭಕ್ಷ್ಯಯೋಗ್ಯ ಟ್ಯಾಲೊ ಎಣ್ಣೆ ದೊರಕುತ್ತದೆ. ಇದು ಚ್ಯೂಯಿಂಗ್ ಗಮ್, ಬೇಕರಿ ಖಾದ್ಯಗಳಲ್ಲಿ ಬಳಕೆಯಾಗುತ್ತದೆ.

ದನಗಳ ಅಂಗಾಂಶಗಳನ್ನು ಜೋಡಿಸುವ ಕೊಲಾಜೆನ್ ಎಂಬ ದ್ರವ್ಯಕ್ಕೆ ಭಾರೀ ಬೇಡಿಕೆ ಇದೆ. ಚರ್ಮವನ್ನು ಹಿಂಡಿದಾಗಲೂ ಕೊಲಾಜೆನ್ ಸಿಗುತ್ತದೆ. ಇದರ ವೈದ್ಯಕೀಯ ಉಪಯೋಗದ ಪಟ್ಟಿಯೇ ಸಾಕಷ್ಟು ದೀರ್ಘವಿದೆ. ಹಿರಿಯ ನಾಗರಿಕರಿಗೆ ಮೂತ್ರ ವಿಸರ್ಜನೆ ಅನಿಯಂತ್ರಿತವಾದಾಗ ಇದನ್ನೇ ಚುಚ್ಚುಮದ್ದಿನ ಔಷಧವಾಗಿ ಕೊಡುತ್ತಾರೆ. ಗಾಯಗಳಿಗೆ ಸುತ್ತಲೆಂದು ನಂಜುನಿರೋಧಕ ಬ್ಯಾಂಡೇಜ್‌ಗಳ ತಯಾರಿಕೆಗೆ ಇದೇ ಬೇಕು. ಗಾಯ ಒಣಗಿದ ನಂತರ ಆಳವಾದ ಗೀರು ಬಿದ್ದಿದ್ದರೆ, ಸುರೂಪ ಚಿಕಿತ್ಸಕರು ಅದನ್ನು ಮರೆಮಾಚಲೆಂದು ಕೊಲಾಜೆನ್ ತುಂಬುತ್ತಾರೆ. ಕಣ್ಣಿನ ಪೊರೆ ನಿವಾರಣೆಗೆ ಪಾಪೆ ಕವಚವಾಗಿ ಕೂಡ ಇದು ನೆರವಿಗೆ ಬರುತ್ತದೆ. ಇನ್ನು ಖಾದ್ಯ ಉದ್ಯಮದಲ್ಲಂತೂ ಇದೇ ಕೊಲಾಜೆನ್ ಪಾತ್ರವನ್ನು ಹೇಳುವುದೇ ಬೇಡ. ಜಿಲೆಟಿನ್ ಪುಡಿ ಇದರಿಂದಲೇ ತಯಾರಾಗುತ್ತದೆ. ಜೆಲ್ಲಿ, ಜಾಮ್‌ಗಳಿಗೆ ಇದಿಲ್ಲದಿದ್ದರೆ ಆಗುವುದಿಲ್ಲ.

ಬಹಳಷ್ಟು ಸೌಂದರ್ಯ ವರ್ಧಕ ದ್ರವ್ಯಗಳಲ್ಲಿ ಕೊಲಾಜೆನ್ ಕ್ರೀಮ್ ಇದ್ದೇ ಇರುತ್ತದೆ. ಜತೆಗೆ ತರಾವರಿ ಮುಲಾಮು, ನೋವು ನಿವಾರಕ ಎಣ್ಣೆಗೆಲ್ಲ ಇದೇ ಬೇಕು. ಫೊಟೊಗ್ರಫಿ, ಸಿನಿಮಾ ಫಿಲ್ಮ್ ತಯಾರಿಕೆಗೂ ಇದು ಕಚ್ಚಾವಸ್ತುವಾಗಿ ಬಳಕೆಯಾಗುತ್ತದೆ. ಸಿನೆಮಾ ನಟ ನಟಿಯರ ಮುಖದಲ್ಲಿ ಸುಕ್ಕುಗಳು ಕಾಣಿಸದಂತೆ ಬಳಸುವ ವೃದ್ಧಾಪ್ಯನಿರೋಧಕ ಕ್ರೀಮ್ ಕೂಡ ಇದರಿಂದಲೇ ತಯಾರಾಗುತವೆ.

ಮಲಿನ ಗಾಳಿಯನ್ನು ಸೋಸಲು ಇಂದು ಬಳಕೆಯಾಗುತ್ತಿರುವ ವಿಧವಿಧದ ಫಿಲ್ಟರ್‌ಗಳನ್ನು ದನಗಳ ಕೂದಲಿನಿಂದ ತಯಾರಿಸಲಾಗುತ್ತದೆ. ನೀವು ಕೂತಿದ್ದ ಕಾರಿನ ಕುಶನ್ ತುಂಬಾ ದುಬಾರಿಯದಾಗಿದ್ದರೆ, ಅದು ವಿಶೇಷವಾಗಿ ಸಂಸ್ಕರಿಸಿದ ದನದ ಚರ್ಮದ್ದೇ ಇದ್ದೀತು.

ಇದು ಸಂಕ್ಷಿಪ್ತ ಗೋಚರಿತ್ರೆ. ಇಷ್ಟೆಲ್ಲ ವಿಧಗಳಲ್ಲಿ ಕೈಗಾರಿಕೆಗಳಲ್ಲಿ ಬಳಕೆಯಾದ ನಂತರವೂ ಇನ್ನಷ್ಟು ಗೋದ್ರವ್ಯಗಳು ಕಸಾಯಿಖಾನೆಗಳಲ್ಲಿ ಉಳಿದಿರುತ್ತವೆ. ಅವನ್ನೆಲ್ಲ ಬಾಚಿ ಒಣಗಿಸಿ ಪುಡಿ ಮಾಡಿ, ಪಶು ಆಹಾರವಾಗಿ ಗೋವುಗಳಿಗೆ ತಿನ್ನಿಸಿದ್ದರಿಂದಲೇ ಅವುಗಳ ಶರೀರದಲ್ಲಿ ಪ್ರಯಾನ್ ಎಂಬ ಪ್ರಳಯಕಾರಿ ಪ್ರೋಟೀನುಗಳು ಉತ್ಪಾದನೆಯಾಗಿ ಹುಚ್ಚುಹಸು ಕಾಯಿಲೆ ಬಂತೆಂದು ಹೇಳಲಾಗುತ್ತದೆ. ಕಸಾಯಿಖಾನೆಯ ಉಳಿಕೆ ಕಚಡಾ ವಸ್ತುಗಳನ್ನು ಶಾಖೋತ್ಪನ್ನ ವಿದ್ಯುತ್ ಘಟಕಗಳಲ್ಲಿ ಇಂಧನವಾಗಿ ಉರಿಸುವ ಸಂಪ್ರದಾಯ ಆರಂಭವಾಗಿದೆ.

ಸರಿ, ವಿದ್ಯುತ್ ಉತ್ಪಾದನೆಯ ನಂತರವಾದರೂ ಕತೆ ಮುಗಿಯಿತೆ? ಇಲ್ಲ ನಿಲ್ಲಿ. ಉರಿಸಿದ ನಂತರ ಉಳಿಯುವ ಹಾರುಬೂದಿಯನ್ನು ಏನು ಮಾಡೋಣ? ಅದರಲ್ಲಿ ಕೆಲವು ಪಾಲು ಹೊಲ ಗದ್ದೆಗಳಿಗೆ ಹೋಗುತ್ತವೆ. ಇನ್ನು ಕೆಲವು ಪಾಲನ್ನು ಮನೆಕಟ್ಟುವ ಇಟ್ಟಿಗೆಯಾಗಿ ಪರಿವರ್ತಿಸಲಾಗುತ್ತದೆ.

ಅಮೃತಶಿಲೆಯ ಮಹಲುಗಳಿಗೇನೂ ಇಂಥ ಇಟ್ಟಿಗೆಗಳು ಬಳಕೆಯಾಗಲಿಕ್ಕಿಲ್ಲ. ಆದರೆ ದನದ ಕೊಟ್ಟಿಗೆಗಳ ನಿರ್ಮಾಣಕ್ಕಂತೂ ಇವು ಧಾರಾಳ ನೆರವಿಗೆ ಬರುತ್ತವೆ.

ಇದು ಮುಗಿಯುವ ಕತೆಯೇ ಅಲ್ಲ ಎನ್ನುತ್ತ ಪುಟ ಮಗುಚಿ ಎದ್ದು ಹೊರಟಿರಾ? ಹೊರಡುವ ಮುನ್ನ ಇಲ್ಲಿ ಮುದ್ರಿತವಾದ ಅಕ್ಷರಗಳತ್ತ ಒಮ್ಮೆ ಕಣ್ಣು ಹಾಯಿಸಿ. ಇದಕ್ಕೆ ಬಳಸಿದ ಇಂಕಿನಲ್ಲಿ ಕೂಡ ಗೋವಿನ ಅಂಶವಿದೆ.

ಇನ್ನೂ ಹೆಚ್ಚಿನ ಮಾಹಿತಿ ಬೇಕೆಂದಿದ್ದರೆ ನೋಡಿ:
http://www.rense.com/general6/cow.htm

**– ನಾಗೇಶ ಹೆಗಡೆ**

*ಗೋಹತ್ಯಾ ನಿಷೇಧಕ್ಕೆ ಮಾಡಬೇಕು ಕಾನೂನು*
*ಅದಕ್ಕಾಗಿ ಹೋರಾಡಬೇಕು ಸದಾ ನಾನು ನೀನು.*
*ಪರೋಪಕಾರಿ ಗೋವುಗಳ ಆಯುಷ್ಯ ಅತ್ಯಲ್ಪ*
*ಋಣತೀರಿಸಲು ಮಾಡೋಣ ಸಂರಕ್ಷಣೆಯ ಸಂಕಲ್ಪ*

# ಕೋಟಿ ನೀರಾಜನ

ಹಿಂದೆಂದೂ ಜಗತ್ತು ಕಂಡು ಕೇಳರಿಯದ ರೀತಿಯಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ನವಂಬರ್ ೧೮, ೨೦೦೭ರಂದು ಗೋಮಾತೆಗೆ ಕೋಟಿ ನೀರಾಜನ ಜರುಗಿತು. ಸಹಸ್ರಾರು ಸಂಖ್ಯೆಯಲ್ಲಿ ಸೇರಿದ ಮಾತೆಯರು ಗೋಮಾತೆಗೆ ಆರತಿ ಬೆಳಗಿದರು. ಆರತಿಗೆ ಮೊದಲು ಹಲವು ಸಾಂಸ್ಕೃತಿಕ ಕಾರ್‍ಯಕ್ರಮಗಳು, ಭಾಷಣ ಮತ್ತು ಆಶೀರ್ವಚನಗಳ ಕಾರ್ಯಕ್ರಮವಿತ್ತು. ಆ ಕಾರ್ಯಕ್ರಮದಲ್ಲಿ ಗಣ್ಯರು ಹೇಳಿದ ಮಾತುಗಳು ಮತ್ತು ಕೆಲವು ಛಾಯಾಚಿತ್ರಗಳು ಇಲ್ಲಿವೆ.






ಕಾರ್ಯಕ್ರಮದ ಪ್ರಾರಂಭದಲ್ಲಿ ಗೋಧ್ವಜದ ಆರೋಹಣ ಮತ್ತು ಗೋವಿನ ಆರಾಧನೆ.





**ಯಲ್ಲಪ್ಪ ರೆಡ್ಡಿ:** ೩೦% ಭೂಮಿ ಬಂಜರಾಗಿದೆ. ಇದಕ್ಕೆ ಕಾರಣ ರಾಸಾಯನಿಕಗಳ ಬಳಕೆ. ದೇಶೀ ಹಸುಗಳಿಂದ ತಯಾರಾಗುವ ಗೊಬ್ಬರ ತುಂಬ ಶ್ರೇಷ್ಠ. ಎರೆಹುಳಗಳಿಗೆ ಇವೇ ಇಷ್ಟ. ಹೈಬ್ರಿಡ್ ತಳಿಗಳ ಹಸುಗಳ ಸೆಗಣಿಯನ್ನು ಎರೆಹುಳಗಳು ತಿನ್ನುವುದಿಲ್ಲ. ಬೆಂಗಳೂರು ಸುತ್ತಮುತ್ತ ಸುಮಾರು ೧೫೦೦೦ ಎಕ್ರೆಗಳಷ್ಟು ಗೋಮಾಳಗಳು ನಾಶವಾಗಿವೆ. ಇದನ್ನು ನಾವು ಅಭಿವೃದ್ಧಿ ಎಂದು ಕರೆಯುವಂತಿಲ್ಲ.





**ಶ್ರೀ ಚಿದಾನಂದ ಸರಸ್ವತಿ** (ಪರಮಾರ್ಥ ಆಶ್ರಮ, ಹೃಷೀಕೇಶ): ಗೋಮಾತೆಯ ಬಗ್ಗೆ ಅರಿವನ್ನು ಜನರಲ್ಲಿ ಜಾಗ್ರಗೊಳಿಸಿದ್ದಕ್ಕಾಗಿ ನಾನು ಶ್ರೀ ರಾಘವೇಶ್ವರ ಸ್ವಾಮೀಜಿಯವರನ್ನು ಅಭಿನಂದಿಸುತ್ತೇನೆ. ನಾಲ್ಕು ವಿಷಯಗಳು ಅತಿಮುಖ್ಯ – ಮಾತೆ, ಮಾತೃಭಾಷೆ, ಮಾತೃಭೂಮಿ, ಗೋಮಾತೆ. ಭಾರತೀಯ ಮಾತೆಯರು ಜಗತ್ತಿನಲ್ಲೇ ಅತಿಶ್ರೇಷ್ಠರು.



**ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ** (ಪೇಜಾವರ ಮಠಾಧೀಶರು): ಶ್ರೀಕೃಷ್ಣ ಪರಿಸರವನ್ನು ಆರಾಧಿಸಲು ಕರೆನೀಡಿದ. ಗೋವರ್ಧನ ಪೂಜೆ ಮಾಡಿದ. ಇವತ್ತು ಗೋವರ್ಧನ ಕಾರ್ಯ ಶ್ರೀರಾಮಚಂದ್ರಾಪುರ ಮಠ ಮಾಡುತ್ತಿದೆ. ನಮಗೆ ರಾಜ್ಯ ಮಾತ್ರ ಬಂದಿದೆ ನಿಜವಾದ ಸ್ವರಾಜ್ಯ ಬಂದಿಲ . ಸ್ವಂತಿಕೆ, ಪರಿಸರ, ಪರಂಪರೆ –ಇವುಗಳ ಸಂರಕ್ಷಣೆಗೆ ಈ ಕೋಟಿ ನೀರಾಜನ.





**ಶ್ರೀ ರಾಘವೇಶ್ವರ ಸ್ವಾಮೀಜಿ:** ಮನುಷ್ಯ ಬೆಳ್ಳಿ. ಗೋವು ಬಂಗಾರ. ಮನುಷ್ಯ ಮಾತನಾಡಿಯೇ ಜೀವನವನ್ನು ಕಳೆಯುತ್ತಾನೆ. ಗೋವಿಗೆ ಭಾಷೆ ಇಲ್ಲ. ಅದು ಮೌನಿ. ಗೋವು ಮಾಸುವುದಿಲ್ಲ. ಗೋವು ನಿರಾಭರಣ ಸುಂದರಿ. ಅವಳ ಸೌಂದರ್ಯ ಸಂಪತ್ತು ಅಪಾರ, ಅನಂತ. ದುರದೃಷ್ಟ ಎಂದರೆ ಆಕೆಯ ಸಂಕಟವೂ ಅನಂತ. ಆಕೆ ಸಂಕಟವನ್ನು ವ್ಯಕ್ತಪಡಿಸಲಾರಳು. ಆ ಗೋಮತೆಗೆ ಈ ಕಾರ್ಯಕ್ರಮ ಭಾಷೆ. ಇದು ಅಖಿಲ ಗೋವಂಶದ ದನಿ. ಗೋಮಾತೆಗೆ ಆರತಿ ಎತ್ತಿದರೆ ಎಲ್ಲ ದೇವರಿಗೆ ಆರತಿ ಎತ್ತಿದಂತೆ. ಗೋವಿಗೆ ರಕ್ಷಣೆ ನೀಡುವ ಮೂಲಕ ಕಲಿಯುಗ ಕೊನೆಯಾಗಲಿ, ಕೃತಯುಗ ಮತ್ತೆ ಬರಲಿ. ಭೂಮಾತೆ ಆಹಾರ ನೀಡಬೇಕಾದರೆ ಗೋಮಾತೆ ಗೊಬ್ಬರ ನೀಡಬೇಕು. ಗೋಮಾತೆಯ ಸಂಕಟ ಇನ್ನೊಂದು ಮಾತೆಗೆ ಮಾತ್ರ ಅರ್ಥವಾಗುತ್ತದೆ. ಆದುದರಿಂದ ಮಾತೆಯರಿಂದ ಗೋಮಾತೆಗೆ ನೀರಾಜನ. ಅಂದು ದೇಶಪ್ರೇಮವನ್ನು ಸ್ಫುರಿಸಿದ್ದು "ವಂದೇ ಮಾತರಂ". ಇಂದು ದೇಶಪ್ರೇಮವನ್ನು ಜಾಗೃತಗೊಳಿಸಲು "ವಂದೇ ಗೋಮಾತರಂ". ಇದು ಸ್ವಾಭಿಮಾನದ, ಸ್ವಾತಂತ್ರ್ಯದ ಸಂಕೇತ.